# ಹೊಸ ಮನುಷ್ಯ

ಬೆಲೆ : ರೂ ೧೦-೦೦

ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

**ತಿಂಗಳ ವೈಚಾರಿಕ ಡೈಜೆಸ್ಟ್**

ಸಂಪುಟ - ೧೫ ಮೇ - ೨೦೧೫ ಸಂಚಿಕೆ - ೧೦

## ಅಸ್ಥಿರ ಬದುಕಿನತ್ತ ಸಾಗುತ್ತಿದ್ದೇವೆಯೇ?

## ಇಸ್ಲಾಂಗೊಂದು ಪುನರುಜ್ಜೀವನದ ಅಗತ್ಯವಿದೆ

## ಬದನವಾಳು ಸತ್ಯಾಗ್ರಹ :

ಒಂದು ಅನಿಸಿಕೆ, ಒಂದು ಸಲಹೆ

## ಕನ್ನಡವೊಂದು ಸುಂದರ ಬದುಕಾಗಲಿ

# ಜನಪದ ವಿಚಾರದಲ್ಲಿ

ಮೇ -೨೦೧೫

# ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೫
ಸಂಪುಟ - ೧೫
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

**ಸಲಹಾ ಸಮಿತಿ**
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

**ಚಂದಾ ವಿವರ**
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-


**ಸಂಪರ್ಕ ವಿಳಾಸ**
ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.net


# ಮೇಡಿನ್ನಿಂಡಿಯಾ, ಡಿಜಿಟಲ್ ಇಂಡಿಯಾ

ಹೂಡ ಬನ್ನಿ, ಹಾಡ ಬನ್ನಿ
ಓ ಭಾರತ ಭಾಗ್ಯ ವಿಧಾತರೆ
ಕೆಂಪುಕೋಟೆಯ ವಾಣಿ ಇದು
ವಿಶ್ವ ವಣಿಜ ಬಾಂಧವರೆ
ಹೂಡ ಬನ್ನಿ, ಹಾಡ ಬನ್ನಿ
'ಮೇಡಿನ್ನಿಂಡಿಯಾ' ಹೇಳ ಬನ್ನಿ
'ಡಿಜಿಟಲ್ ಇಂಡಿಯಾ' ಮಾಡ ಬನ್ನಿ

ಕಾಮ್ ತುಮಾರಾ ನಾಮ್ ಹಮಾರಾ
ಬಚ್ಚಾ ತುಮಾರಾ ಲೇಬಲ್ ಹಮಾರಾ
ಹೂಡ ಬನ್ನಿ, ಹಾಡ ಬನ್ನಿ
ಭಾವ ನಿಮ್ಮದು, ರಾಗ ನಮ್ಮದು
'ಮೇಡಿನ್ನಿಂಡಿಯಾ' ಹೇಳ ಬನ್ನಿ
'ಡಿಜಿಟಲ್ ಇಂಡಿಯಾ' ಮಾಡ ಬನ್ನಿ

ಚನ್ನಮ್ಮನಿಲ್ಲ, ಟಿಪ್ಪೂ ಇಲ್ಲ
ಭಗತ್ ಇಲ್ಲ, ಗಾಂಧಿ ಇಲ್ಲ
ಅಸಹಕಾರ ಮೊದಲೇ ಇಲ್ಲ
ಮನೆಯಲ್ಲಿ ಮನೆಯೊಡಯನೇ ಇಲ್ಲ
ಕ್ವಿಟ್ ಇಂಡಿಯಾ ಮೂರ್ಖರ ಮಂತ್ರ
'ಕೋಟ್' ಇಂಡಿಯಾ ಜಾಣರ ತಂತ್ರ
ಹೂಡ ಬನ್ನಿ, ಹಾಡ ಬನ್ನಿ
'ಮೇಡಿನ್ನಿಂಡಿಯಾ' ಹೇಳ ಬನ್ನಿ
'ಡಿಜಿಟಲ್ ಇಂಡಿಯಾ' ಮಾಡ ಬನ್ನಿ

'ಖಂಡವಿದೆ, ಮಾಂಸವಿದೆ
ಗುಂಡಿಗೆಯ ಬಿಸಿರಕವಿದೆ'
ಭೂಮಿ ಇದೆ ಭೂಗರ್ಭವಿದೆ
ಚಿಲ್ಲರೆ ಕಾಸಿಗೆ ಬೆವರೂ ಇದೆ
ಲಾಠಿ ಇದೆ, ಚಾಟಿ ಇದೆ ಸದನದಲ್ಲಿ ಬಲವಿದೆ

ಸಾರೆ ಜಹ್ಲಾಸೆ ಅಚ್ಛಾ
ಹಿಂದೂ ಸತ್ತಾ ಹಮಾರಾ
ಹೂಡ ಬನ್ನಿ, ಹಾಡ ಬನ್ನಿ
'ಮೇಡಿನ್ನಿಂಡಿಯಾ' ಹೇಳ ಬನ್ನಿ
'ಡಿಜಿಟಲ್ ಇಂಡಿಯಾ' ಮಾಡ ಬನ್ನಿ.

– ಡಾ.ಸಿದ್ದನಗೌಡ ಪಾಟೀಲ, ಸಾಭಾರ-ಹೊಸತು

# ಚಿಂತನೆಗೊಂದು ಸಂಗತಿ

ತಮ್ಮನ್ನು ವಿಚಾರವಾದಿಗಳೆಂದೂ, ಬುದ್ಧಿಜೀವಿಗಳೆಂದೂ, ಪುರೋಗಾಮಿಗಳೆಂದೂ ಭಾವಿಸಿಕೊಂಡಿರುವ ಕೆಲವರು ರಾಮಾಯಣ ಮತ್ತು ಮಹಾಭಾರತಗಳ ಮೇಲೆ ಅಸಂಬದ್ಧವಾದ, ವೈಚಾರಿಕ ದಾಳಿ ಮಾಡುತ್ತಿದ್ದಾರೆ. ಆ ಎರಡು ಗ್ರಂಥಗಳು ದೀರ್ಘ ಕಾಲದಿಂದ ಭಾರತೀಯರ ಧರ್ಮ, ಸಂಸ್ಕೃತಿ, ಸಾಹಿತ್ಯ ಹಾಗೂ ನೃತ್ಯಕಲೆ, ಶಿಲ್ಪಕಲೆ, ಜಾನಪದ ಕಲೆ ಮುಂತಾದವುಗಳಿಗೆ ಸದಾಕಾಲ ಪ್ರೇರಣೆ ಕೊಡುತ್ತಿವೆ. ಅವು ಪುರಾತನ ಶ್ರೇಷ್ಠ ಸಾಹಿತ್ಯಗಳಾಗಿವೆ. ಅವುಗಳಿಂದ ಕನ್ನಡದ ಪ್ರಾಚೀನ ಮತ್ತು ಆಧುನಿಕ ಅನೇಕ ಸಾಹಿತಿಗಳು ಪ್ರೇರಣೆಪಡೆದು ಅನೇಕ ಉದ್ಗ್ರಂಥಗಳನ್ನು, ಕಾವ್ಯಗಳನ್ನು, ಕಥೆ-ಕಾದಂಬರಿಗಳನ್ನು ರಚಿಸಿದ್ದಾರೆ ಮತ್ತು ರಚಿಸುತ್ತಲೂ ಇದ್ದಾರೆ. ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ದೊಡ್ಡಾಟವೆಂಬ ಹೆಸರಿನಲ್ಲಿ ರಂಗಭೂಮಿ ಜೀವಂತವಾಗಿದೆ. ಆ ಎರಡು ಗ್ರಂಥಗಳ ಬಗ್ಗೆ ಅವಹೇಳನಕಾರಿ ಮಾತುಗಳನ್ನಾಡುವುದೆಂದರೆ ಸೂರ್ಯನತ್ತ ಉಗುಳುವ ಕ್ರಿಯೆಯಾಗಿದೆ. ಆಗ ಯಾವ ಪರಿಸ್ಥಿತಿ ಉಂಟಾಗುತ್ತದೊ ಅಂಥದೆ ಪರಿಸ್ಥಿತಿ ಇವರದಾಗುತ್ತದೆ. ಈ ಮಾತು ಕೇವಲ ರಾಮಾಯಣ ಮತ್ತು ಮಹಾಭಾರತಗಳಿಗಷ್ಟೇ ಅನ್ವಯಿಸುವುದಿಲ್ಲ ಜಗತ್ತಿನ ಇತರ ಶ್ರೇಷ್ಠ ಗ್ರಂಥಗಳಿಗೂ ಅನ್ವಯಿಸುತ್ತದೆ. ಈಗಾಗಲೇ ರಾಮಾಸ್ವಾಮಿ ನಾಯ್ಕರ್ ರಂಥ ಕ್ರಾಂತಿಕಾರಿ ನಾಸ್ತಿಕವಾದಿಗಳು ರಾಮಾಯಣ ಗ್ರಂಥವನ್ನು ಸುಟ್ಟುಹಾಕಿಯೂ ಮತ್ತು ರಾಮನ ಚಿತ್ರಕ್ಕೆ ಪಾದರಕ್ಷೆಯ ಹಾರಹಾಕಿಯೂ ಅದರಲ್ಲಿಯ ವಿಚಾರಗಳನ್ನು ಖಂಡಿಸಿದ್ದಾರೆ. ಆದರೆ ಅದೇ ತಮಿಳುನಾಡಿನಲ್ಲಿ ರಾಮನ ಅನೇಕ ಭಕ್ತರಿದ್ದಾರೆ. ರಾಮ ಮತ್ತು ಕೃಷ್ಣರ ಬಗ್ಗೆ ಅಲ್ಲಿಯ ಜನರ ಭಕ್ತಿ ಕಿಂಚಿತ್ತೂ ಕಡಿಮೆಯಾಗಿಲ್ಲ. ಒಂದು ವೇಳೆ ಆ ಗ್ರಂಥಗಳಲ್ಲಿ ಈ ಕಾಲಕ್ಕೆ ಅಸಂಗತವಾದ ವಿಚಾರಗಳಿದ್ದರೆ, ಆಚಾರ ಸಂಹಿತೆಗಳಿದ್ದರೆ ಅವುಗಳನ್ನು ಉದಾಸೀನಮಾಡಿ ಆ ಗ್ರಂಥಗಳಲ್ಲಿಯ ಸದ್ವಿಚಾರಗಳನ್ನು ಎತ್ತಿ ಹಿಡಿಯಬೇಕು. ಆದು ವಿಚಾರವಾದಿಗಳ ಕರ್ತವ್ಯವಾಗಿರಬೇಕು. ವಿತಂಡವಾದ ಮಾಡುವುದು ಅವರ ಅಭ್ಯಾಸವಾಗಬಾರದು. ವೈಚಾರಿಕ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ದುರುಪಯೋಗಮಾಡಿಕೊಳ್ಳುವುದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯುಂಟುಮಾಡುತ್ತದೆ. ವಿಚಾರವಾದಿಗಳು ಹೆಚ್ಚು ಜವಾಬ್ದಾರಿಯುತರು ಆಗಿರಬೇಕೆಂಬುದು ಸಮಾಜದ ನಿರೀಕ್ಷೆಯಾಗಿದೆ. ಇದುವರೆಗೆ ರಾಮಾಯಣ ಮತ್ತು ಮಹಾಭಾರತಗಳನ್ನು ಟೀಕೆಮಾಡಿದವರು ಅದೆಷ್ಟೋ ವಿಚಾರವಾದಿಗಳಿದ್ದಾರೆ. ಅವರ ವಿಚಾರಗಳಿಗೆ ಸಾಕಷ್ಟು ಪ್ರಚಾರವೂ ಸಿಕ್ಕಿತ್ತು. ಅವರು ವ್ಯಕ್ತಪಡಿಸಿದ್ದ ವಿಚಾರಗಳ ಪರಿಣಾಮ ಸಮಾಜದ ಮೇಲೆ ಕಿಂಚಿತ್ತೂ ಆಗಲಿಲ್ಲ. ಏಕೆಂದರೆ ಜನಜೀವನದ ಮಾನಸದಲ್ಲಿ ಆ ಎರಡು ಗ್ರಂಥಗಳ ಬಗ್ಗೆ ಬೇರೂರಿರುವ ಗೌರವ, ಭಕ್ತಿ ಹಾಗೂ ಅವು ಜನರಲ್ಲಿ ಉಂಟುಮಾಡುವ ಆಧ್ಯಾತ್ಮಿಕ ಭಾವನೆಗಳು ಎಷ್ಟು ಬಲವಾಗಿವೆ ಎಂದರೆ ಆ ಗ್ರಂಥಗಳನ್ನು ಟೀಕಿಸಿದವರು ಹೇಳಹೆಸರಿಲ್ಲದವರಾಗಿದ್ದಾರೆ. ಆದರೆ ಆ ಗ್ರಂಥಗಳು ಸಾರುತ್ತಿರುವ ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳು ಕಾಲಕಳೆದಂತೆ ಹಸಿರಾಗಿಯೇ ಉಳಿದಿವೆ.

# ಅಸ್ಥಿರ ಬದುಕಿನತ್ತ ಸಾಗುತ್ತಿದ್ದೇವೆಯೇ?

– ಸುರೇಂದ್ರ ಕೌಲಗಿ

(ಅಭಿವೃದ್ಧಿ ಎಂಬ ಪದದ ಅರ್ಥವನ್ನು ಸೀಮಿತಗೊಳಿಸಲಾಗಿದೆ. ಹಾಗೂ ವಿರೂಪಗೊಳಿಸಲಾಗಿದೆ. ಕೇವಲ ಕೈಗಾರಿಕಾಭಿವೃದ್ಧಿ, ಕೇವಲ ಮಾರುಕಟ್ಟೆಗಳ ಅಭಿವೃದ್ಧಿ, ಅಥವಾ ಕೇವಲ ಲಾಭದ ಆರ್ಥಿಕ ವೃದ್ಧಿ ಮಾತ್ರವೇ ಅಭಿವೃದ್ಧಿಯೆಂದು, ಸರಕಾರಗಳು, ರಾಜಕೀಯ ಪಕ್ಷಗಳು ಹಾಗೂ ಅಧಿಕಾರಿಗಳು ತಿಳಿದಿದ್ದಾರೆ. ಜಿ.ಡಿ.ಪಿ ಎಂಬ ಸೀಮಿತ ಲೆಕ್ಕಾಚಾರವು ಮಾನವ ಅಭಿವೃದ್ಧಿಯ ಸೂಚ್ಯಂಕ ಸಮಗ್ರ ಖಂಡಿತಾ ಅಲ್ಲ. ಜನರ ಸಂತಸ ಹಾಗೂ ಜೀವಿಗಳ ನೆಮ್ಮದಿಯು ಅಭಿವೃದ್ಧಿಯ ಮಾನದಂಡವಾಗಿದೆ. ಸಮಾಜದ ಸುಸ್ಥಿರತೆ ಹಾಗೂ ಸಂಸ್ಕೃತಿಗಳ ಮುಂದುವರಿಕೆ ಅಭಿವೃದ್ಧಿಯ ಮಾನದಂಡವಾಗಿದೆ. ದನಕಾಯುವ ಹುಡುಗ ಹಾಗೂ ನೂಲು ಸುತ್ತುವ ಹುಡುಗಿ ಕೂಡ ಅಭಿವೃದ್ಧಿಯ ಹರಿಕಾರರೆಂದು ಮಾನ್ಯಮಾಡಬೇಕು, ಸಮಾನತೆ ಹಾಗೂ ಸಹಕಾರ ತತ್ವಗಳನ್ನು ಪೋಷಿಸುವ ಆರ್ಥಿಕತೆ ಮಾತ್ರವೇ ಅಭಿವೃದ್ಧಿಪರ ಆರ್ಥಿಕತೆ. – ಬದನವಾಳು ಘೋಷಣೆ-೧೯/೦೪/೨೦೧೫.)

ಮೇಕ್ ಇನ್ ಇಂಡಿಯಾ ಇದು ಇಂದಿನ ಸರ್ಕಾರದ ಘೋಷ ವಾಕ್ಯವಾಗಿದೆ. ಇದಕ್ಕನುಗುಣವಾಗಿ ಸರ್ಕಾರ ವಿದೇಶದಲ್ಲಿಯ ಕೈಗಾರಿಕೋದ್ಯಮಿಗಳನ್ನು ಭಾರತಕ್ಕೆ ಆಹ್ವಾನಿಸುತ್ತಿದೆ. ಉದ್ದಿಮೆ ಸ್ಥಾಪಿಸಲು ಅಗತ್ಯವಾದ ಎಲ್ಲ ಮೂಲ ಸೌಕರ್ಯಗಳನ್ನು ವಿಶೇಷ ರಿಯಾಯಿತಿಯಲ್ಲಿ ಒದಗಿಸಿಕೊಡುವುದಾಗಿ ಅವುಗಳಿಗೆ ಭರವಸೆ ಕೊಡುತ್ತಿದೆ. ಮುಖ್ಯವಾಗಿ ಬೇಕಾದ ಭೂಮಿಯನ್ನೂ ಸಹ ದೇಶದ ರೈತರ ಹಿತವನ್ನು ಬಲಿಗೊಟ್ಟಾದರೂ ಮತ್ತು ಗ್ರಾಮಗಳನ್ನು ನಿರ್ನಾಮ ಮಾಡಿಯಾದರೂ ಕೊಡುವ ಧೈರ್ಯ ಮಾಡುತ್ತಿದೆ. ಭಾರತದಲ್ಲಿ ಭಾರತೀಯರು ಭಾರತದ ಸಂಪನ್ಮೂಲಗಳನ್ನು ಉಪಯೋಗಿಸಿ ಪದಾರ್ಥಗಳನ್ನು ತಯಾರಿಸಬೇಕೆಂಬ ಮೂಲ ವಿಚಾರವನ್ನು ಬಿಟ್ಟು ವಿದೇಶೀ ಕಂಪನಿಗಳನ್ನು ಆಹ್ವಾನಿಸಿ ಅವು ತಮ್ಮ ಬಂಡವಾಳ ಉಪಯೋಗಿಸಿ ವಸ್ತುಗಳನ್ನು ಭಾರತದಲ್ಲಿ ತಯಾರಿಸಬೇಕೆಂಬ ಯೋಜನೆಯನ್ನು ಕೇಂದ್ರ ಸರ್ಕಾರ ಹಾಕಿಕೊಂಡಿದೆ. ವಿದೇಶದಿಂದ ಬರುವ ಕಂಪನಿಗಳು ಭಾರತದ ಹಿತಕ್ಕಿಂತ ತಮ್ಮ ಹಿತವನ್ನು ನೋಡಿಕೊಳ್ಳುವುದು ಸಹಜ. ತಮ್ಮ ಕಂಪನಿಗಳಲ್ಲಿ ಕೆಲಸ ಮಾಡುವ ಭಾರತೀಯ ಕಾರ್ಮಿಕರಿಗೆ ಬಹುದೊಡ್ಡ ಪ್ರಮಾಣದ ವೇತನವನ್ನು ಕೊಡಬಹುದಾದರೂ ಅದೊಂದು ರೀತಿಯ ಗುಲಾಮಗಿರಿ ಅಥವಾ ಜೀತವಾದಂತೆಯೇ ಆಗುತ್ತದೆ. ಅಲ್ಲದೆ ಅದು ಯಾವಾಗಲೂ ಅಸ್ಥಿರ ಬದುಕಿನ ಜೀವನ ಕ್ರಮವೇ ಆಗುತ್ತದೆಯಲ್ಲದೆ ನೆಮ್ಮದಿಯ ಜೀವನಕ್ಕೆ ದಾರಿಯಾಗುವುದಿಲ್ಲ. ತುಂಬ ಇತ್ತೀಚೆಗೆ ದೇಶದ ಪ್ರಧಾನಿ ಫ್ರಾನ್ಸ್, ಜರ್ಮನಿ

ಮತ್ತು ಕೆನಡ ದೇಶಗಳಿಗೆ ಭೇಟಿಕೊಟ್ಟು ಅಲ್ಲಿಯ ಕೈಗಾರಿಕೋದ್ಯಮಿಗಳನ್ನು ಭಾರತದಲ್ಲಿ ವಿವಿಧ ಪ್ರಕಾರದ ಕೈಗಾರಿಕೆ ಸ್ಥಾಪಿಸಲು ಆಹ್ವಾನಿಸಿದ್ದಾರೆ. ಭಾರತ ಯಾವ ರೀತಿ ದೊಡ್ಡ ಮಾರುಕಟ್ಟೆಯಾಗಿದೆ ಎಂಬುದನ್ನು ಮತ್ತು ಹೇಗೆ ಲಾಭದಾಯಕವಾಗಿದೆಯೆಂಬುದನ್ನೂ ಹೇಳಿದ್ದಾರೆ. ಈ ಕರೆಯ ಬೆನ್ನಲ್ಲಿಯೇ ಫ್ರಾನ್ಸ್ ದೇಶದಿಂದ ಅತ್ಯಾಧುನಿಕ ಯುದ್ಧ ವಿಮಾನಗಳ ಖರೀದಿಗೂ ಪ್ರಸ್ತಾವ ಇಟ್ಟಿದ್ದಾರೆ. ಅಂದರೆ ಪ್ರಧಾನಿಯವರ ಮನಸ್ಸಿನಲ್ಲಿ ಯಾವುದೋ ಯುದ್ಧದ ಭೀತಿ ಕಾಡುತ್ತಿದೆ. ಯುದ್ಧದ ಬೀತಿಯನ್ನಿಟ್ಟುಕೊಂಡು ದೇಶದ ಜನಕ್ಕೆ ವಿದೇಶೀ ಮೂಲದ ಕೈಗಾರಿಕೆಗಳಿಂದ ಜೀವನೋನ್ನತಿ ಮಾಡುವ ಪ್ರಯತ್ನ ಹಾಸ್ಯಾಸ್ಪದವೆನಿಸುತ್ತದೆ. ಅಸ್ಥಿರ ಬದುಕಿನ ಭೀತಿಯನ್ನು ಮನದಲ್ಲಿಟ್ಟುಕೊಂಡು ಸುಸ್ಥಿರ ಬದುಕಿನ ಬಗ್ಗೆ ಆಲೋಚಿಸುವುದರಲ್ಲಿ ವೈರುಧ್ಯವಿದೆ. ಎಲ್ಲಿಯವರೆಗೆ ಈ ಇಬ್ಬಗೆಯ ನೀತಿ ದೂರಾಗುವುದಿಲ್ಲವೋ ಅಲ್ಲಿಯವರೆಗೆ ಮೇಕ್ ಇನ್ ಇಂಡಿಯಾ ನೀತಿಯ ಹಿಂದಿರುವ ಉದ್ದೇಶ ವ್ಯರ್ಥವಾಗುತ್ತದೆ. ಜೊತೆಗೆ ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೂ ತನ್ಮೂಲಕ ರಾಜಕೀಯ ಸ್ವಾತಂತ್ರ್ಯಕ್ಕೂ ಕಂಟಕ ಒದಗುತ್ತದೆ. ಈ ಎಲ್ಲ ಕಾರಣಗಳಿಂದ ಭಾರತೀಯರ ಮುಂದೆ "ಅಸ್ಥಿರ ಬದುಕಿನತ್ತ ಸಾಗುತ್ತಿದ್ದೇವೆಯೇ" ಎಂಬ ಪ್ರಶ್ನೆ ನಿಲ್ಲುತ್ತದೆ.

ಸ್ವಾತಂತ್ರ್ಯ ಬಂದಾಗಿನಿಂದ ಮತ್ತು ಯೋಜನಾ ಯುಗ ಪ್ರಾರಂಭವಾದಾಗಿನಿಂದ ಭಾರತೀಯರು ಗಾಂಧೀಜಿ ಪ್ರತಿಪಾದಿಸಿದ್ದ ಸ್ವರಾಜ್ಯವನ್ನು ಅನುಭವಿಸಲೇ ಇಲ್ಲ. ಬದುಕಿನ ನೆಮ್ಮದಿಗೆ ಮತ್ತು ಸುಸ್ಥಿರ ಜೀವನಕ್ಕೆ ಆಂತರಿಕ ಸುಖ – ಶಾಂತಿ ಮುಖ್ಯವೆಂಬ ಸಂಗತಿಯನ್ನೇ ಮರೆಯಲಾಯಿತು. ಸರಳ ಮತ್ತು ತ್ಯಾಗ ಜೀವನಕ್ಕಿಂತ ಸಂಕೀರ್ಣ ಮತ್ತು ಭೋಗ ಜೀವನಕ್ಕೆ ಆದ್ಯತೆ ದೊರೆಯಿತು. ಬರಬರುತ್ತ ಯಂತ್ರಗಳ ದಾಸರಾಗಿ ದೈವದತ್ತ ನಮ್ಮ ಇಂದ್ರಿಯಗಳ ಉಪಯೋಗವನ್ನು ಅಲಕ್ಷಿಸುವಂತಾಯಿತು. ಶ್ರಮ ಜೀವನ ಕಣ್ಮರೆಯಾಗುತ್ತಾ ಹೋಯಿತು. ತತ್ಪರಿಣಾಮವಾಗಿ ಸ್ವಾವಲಂಬಿ ಜೀವನ ಹೋಗಿ ಪರಾವಲಂಬಿ ಜೀವನ ಬಂದಿತು. ವಿದ್ಯಾಭ್ಯಾಸ ಮಾಡಿದವರೆಲ್ಲ ಶ್ರಮಜೀವಿಗಳ ಬೆನ್ನೇರಿ ಕುಳಿತರು. ಶರೀರ ಶ್ರಮದ ದುಡಿಮೆಗಿಂತ ಮಾನಸಿಕ ದುಡಿಮೆಯ ಕಡೆಗೆ ಒಲವು ಹೆಚ್ಚಾಯಿತು. ಪ್ರತ್ಯಕ್ಷ ಆಹಾರೋತ್ಪಾದನೆಯ ಕ್ಷೇತ್ರಕ್ಕಿಂತ ಸೇವಾ ಕ್ಷೇತ್ರದಲ್ಲಿ ಕೆಲಸಮಾಡುವುದು ಹೆಚ್ಚು ಲಾಭದಾಯಕ, ಸುಖದಾಯಕ ಎಂದೆನಿಸಹತ್ತಿತು. ಹಳ್ಳಿಗಳನ್ನು ಬಿಟ್ಟು ನಗರಗಳಿಗೆ ವಲಸೆ ಹೋಗುವ ಪ್ರಕ್ರಿಯೆ ತೀವ್ರವಾಯಿತು. ನಗರೀಕರಣ ಜೋರಾಯಿತು. ಇಂದು ಬೆಂಗಳೂರಿನ ನಗರದಲ್ಲೊಂದೇ ಒಂದು ಕೋಟಿ ಹತ್ತು ಸಾವಿರ ಜನಸಂಖ್ಯೆಯಾಯಿತು. ಎಲ್ಲೆಲ್ಲಿಯೂ ಸ್ಲಂಗಳು ಉಂಟಾದವು. ಅವುಗಳ ಪಕ್ಕದಲ್ಲಿಯೇ ಬಹು ಅಂತಸ್ತಿನ ಕಟ್ಟಡಗಳೂ, ಗಗನಚುಂಬಿ ಕಟ್ಟಡಗಳೂ ತಲೆಯೆತ್ತಿದವು. ಸಾಮಾನ್ಯ ಮನುಷ್ಯರ ಜೀವನ ದುಸ್ಥರವಾಯಿತು. ಇದು ಸ್ವತಂತ್ರ ಭಾರತದ ಇಂದಿನ ಸ್ಥಿತಿ. ಇನ್ನು ಪರಿಸರದ ನಾಶ, ಹವಾಮಾನದ ವೈಪರೀತ್ಯ, ಕಾಡುಗಳ ನಾಶ ಇತ್ಯಾದಿ ವಿಷಯಗಳ ಬಗ್ಗೆ ಯೋಚಿಸಿದಷ್ಟು ಆತಂಕ ಹುಟ್ಟುವ ಸಂಗತಿಗಳಿವೆ.

ದೇಶದ ಈ ಸ್ಥಿತಿಯನ್ನು ಬದಲಾಯಿಸಬೇಕಾದ ಕಾಲ ಬಂದಿದೆ. ನಮ್ಮ ಮನೆಯ ಬಾಗಿಲ ಮುಂದೆಯೇ ಅದು ನಿಂತಿದೆ. ಉಂಟಾಗುತ್ತಿರುವ ಅಸ್ಥಿರ ಬದುಕಿನ ಸ್ಥಿತಿಯನ್ನು ಬದಲಾಯಿಸಬೇಕಿದೆ. ಅಸ್ಥಿರ ಬದುಕನ್ನೆ ನಿರ್ಮಿಸ ಹೊರಟಿರುವ ರಾಜನೀತಿಯನ್ನು ಬದಲಾಯಿಸಬೇಕಿದೆ. ಸುಸ್ಥಿರ ಬದುಕು ನಮಗೆ ಬೇಕು. ಅದಕ್ಕೆ ಅಭಿವೃದ್ಧಿ ನೀತಿ ಇರಬೇಕು ಎಂಬ ಕೂಗನ್ನು ಜನರು ಹಾಕಬೇಕಿದೆ. ಜನತೆಯ ಈ ಕೂಗು ದಿಲ್ಲಿಯಲ್ಲಿರುವ ಪ್ರಭುತ್ವಕ್ಕೆ ಮುಟ್ಟುವಂತಾಗಬೇಕು. ಅಸ್ಥಿರ ಬದುಕಿನ ಸಾರ್ಕರದ ನೀತಿಯನ್ನು ವಿರೋಧಿಸಿ ಆಮ್ ಆದ್ಮಿ ಪಕ್ಷದ ರ್‍ಯಾಲಿಯ ಸಮಯದಲ್ಲಿ ರಾಜಸ್ಥಾನದ ರೈತ ಗಜೇಂದ್ರಸಿಂಗ್ ಆತ್ಮಹತ್ಯೆ ಮಾಡಿಕೊಂಡದ್ದು ಜನತೆಯ ಆಕ್ರೋಶದ ಸಂಕೇತವಾಗಿದೆ. ಅಂದರೆ ಜನರು ಅಸ್ಥಿರ ಬದುಕಿನ ಬದಲಾಗಿ ಸುಸ್ಥಿರ ಬದುಕನ್ನು ಅಪೇಕ್ಷೆ ಪಡುತ್ತಿದ್ದಾರೆ. ಜನತೆ ಬಯಸುತ್ತಿರುವ ಸುಸ್ಥಿರ ಬದುಕು ಸಾಕಾರಗೊಳ್ಳಬೇಕಾದರೆ ಸುಸ್ಥಿರ ಬದುಕಿನ ಅಪೇಕ್ಷೆಯನ್ನೇ ಜನತೆಯ ನೀತಿ ಅಥವಾ ಲೋಕನೀತಿ ಎಂಬುದಾಗಿ ರೂಪಿಸಬೇಕು. ಈ ಲೋಕನೀತಿ ಅಸ್ಥಿರ ಬದುಕಿನತ್ತ ರಾಜನೀತಿಗೆ ಮುಖಾಮುಖಿಯಾಗಿ ನಿಲ್ಲಬೇಕು. ಬರಲಿರುವ ೨೦೧೯ರ ಚುನಾವಣೆಯಲ್ಲಿ ಲೋಕನೀತಿಯ ಪರವಾದ ಸರ್ಕಾರ ಅಧಿಕಾರಕ್ಕೆ ಬರುವಂತೆ ಭಾರತೀಯರೆಲ್ಲರೂ ಪ್ರಯತ್ನಿಸಬೇಕು. ರಾಜಶಕ್ತಿಯ ಮೇಲೆ ಲೋಕಶಕ್ತಿಯ ಅಂಕುಶ ಉಂಟಾದಾಗಲೇ ದೇಶವನ್ನು ಅಸ್ಥಿರ ಬದುಕಿನತ್ತ ಸಾಗುತ್ತಿರುವುದನ್ನು ತಪ್ಪಿಸಿ ಸುಸ್ಥಿರ ಬದುಕಿನತ್ತ ಸಾಗುವಂತೆ ಮಾಡಬಹುದು. ಲೋಕನೀತಿಯ ಬಲಸಂವರ್ಧನೆಯ ಕೆಲಸ ತುರ್ತಾಗಿ ಆಗಬೇಕಿದೆ ಮತದಾರರೂ ಆಗಿರುವ ನಾವು ಈ ಬಗ್ಗೆ ಜಾಗೃತಿ ಮೂಡಿಸಬೇಕು. ಜಾಗೃತಿ ಮೂಡಿಸುವ ಕಾರ್ಯ ಚಳುವಳಿಯ ರೂಪದಲ್ಲೇ ನಡೆಯಬೇಕು. ಜಾಗೃತಿ ಚಳುವಳಿ ಎಷ್ಟು ಬಿರುಸಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಬೇಕೆಂದರೆ ಲೋಕನೀತಿಗೆ ವಿರುದ್ಧವಾದ ಸರ್ಕಾರವನ್ನು ತೆಗೆದುಹಾಕಿ ಲೋಕನೀತಿಗೆ ಪರವಾದ ಸರ್ಕಾರವನ್ನು ಸ್ಥಾಪಿಸುವಂತಾಗಬೇಕು. ನೂರು ವರ್ಷಗಳ ಹಿಂದೆ ಮಹಾತ್ಮಾ ಗಾಂಧೀಜಿಯವರು ಯಾವ ವಿಚಾರಗಳನ್ನು ತಮ್ಮ ಹಿಂದ್ ಸ್ವರಾಜ್ ಪುಸ್ತಕದ ಮೂಲಕ ಜಗತ್ತಿನ ಮುಂದೆ ಇಟ್ಟಿದ್ದರೊ ಆ ವಿಚಾರಗಳನ್ನು ಸಾಕಾರಗೊಳಿಸುವ ಶಕ್ತಿ ಜನತೆಗೆ ಬರುವಂತೆ ಮಾಡಬೇಕು. ಅಂಥ ಶಕ್ತಿ ಬರಬೇಕಾದರೆ ಗಾಂಧೀಜಿಯವರು ಜನತಾಶಕ್ತಿಯ ಬಲಸಂರ್ಧನೆಗಾಗಿ ಹೇಳಿದ್ದ ಮಾರ್ಗಗಳಾದ ಹರತಾಳ, ಅಸಹಕಾರ, ಬಹಿಷ್ಕಾರ, ಪಿಕೆಟಿಂಗ್, ಕರನಿರಾಕರಣೆ, ಸತ್ಯಾಗ್ರಹ ಹಾಗೂ ಆಮರಣ ಉಪವಾಸದಂತಹ ಅಹಿಂಸಕ ಮಾರ್ಗವನ್ನು ಅನುಸರಿಸಬೇಕು. ಅದಕ್ಕಾಗಿ ಮೇಕ್ ಇನ್ ಇಂಡಿಯಾ ನೀತಿಯಲ್ಲಿ ಇರುವ ಬೃಹತ್ ಉತ್ಪಾದನೆ ಮತ್ತು ನಿರುದ್ಯೋಗ ಸೃಷ್ಟಿಯ ಬದಲಾಗಿ ಗಾಂಧೀಜಿಯವರು ಪ್ರತಿಪಾದಿಸಿದ್ದ ಜನಸಮುದಾಯದಿಂದ ಉತ್ಪಾದನೆ ಮತ್ತು ಉದ್ಯೋಗ ಸೃಷ್ಟಿ ಎಂಬ ನೀತಿಯನ್ನು ಅಳವಡಿಸಿಕೊಳ್ಳುವಂತೆ ಮಾಡಬೇಕು. ಅಂಥ ಹೋರಾಟಕ್ಕೆ ನಾವೆಲ್ಲರೂ ಪ್ರಯತ್ನಿಸೋಣ. ✷

# ಇಸ್ಲಾಂಗೊಂದು 'ಪುನರುಜ್ಜೀವನ'ದ ಅಗತ್ಯವಿದೆ...

ಮೂಲ : ಹಸನ್ ಸುರೂರ್ ಅನು : ಡಾ.ಎಸ್.ಸಿರಾಜ್ ಅಹಮದ್

(ಅಸಹನೆಯ, ಕ್ರೋಧದ, ಬರ್ಬರ ಹಿಂಸೆಯ ಪ್ರತೀಕವಾಗುತ್ತಿರುವ ದುರಂತ ಇಸ್ಲಾಮನ್ನು ಒಂದು ಧರ್ಮವಾಗಿ ನೋಡುವ ಬಗೆಗಳ ಬಗ್ಗೆಯೇ ಇಂದು ಚರ್ಚೆಗಳು ಆರಂಭವಾಗಿವೆ. ಓರ್ವ ನಿಷ್ಠಾವಂತ ಅನುಯಾಯಿಯಾಗಿ, ಇಸ್ಲಾಂನ ಓರ್ವ ಧಾರ್ಮಿಕ ಪಂಡಿತರಾಗಿ ಮತ್ತು ಸಾರ್ವಜನಿಕ ಬುದ್ಧಿಜೀವಿಯಾಗಿ ಇಂದು ಯಾವುದನ್ನು ಇಸ್ಲಾಮೀ ಭಯೋತ್ಪಾದನೆ ಎಂದು ಕರೆಯಲಾಗುತ್ತಿದೆಯೋ, ಅದಕ್ಕೆ ಇಸ್ಲಾಂ ಸಾರ್ವಜನಿಕವಾಗಿ ಅಭಿವ್ಯಕ್ತಿಗೊಂಡಿರುವ ಬಗೆಗಳಲ್ಲೇ, ಅದರ ಚರಿತ್ರೆಯಲ್ಲೇ ತೊಂದರೆಗಳಿವೆಯೇ ಎಂಬ ಒಂದು ವಸ್ತುನಿಷ್ಠ ಮತ್ತು ದಿಟ್ಟ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ. – ಸಂ)

ಪ್ರತಿಯೊಂದು ಇಸ್ಲಾಮಿಕ್ ಭಯೋತ್ಪಾದನೆಯ ಕೃತ್ಯದ ನಂತರ, ಇಂಥ ಕೃತ್ಯ ಮಾಡುವವರೆಲ್ಲ ನಿಜವಾಗಿಯೂ ಮುಸ್ಲಿಮರಲ್ಲ, ಅವರದು ನಿಜ ಅರ್ಥದಲ್ಲಿ ಇಸ್ಲಾಮ್ ಆಗಲು ಸಾಧ್ಯವಿಲ್ಲ ಎಂದು ಮುಸ್ಲಿಮರೆಲ್ಲ ಹೇಳಿಕೆ ನೀಡುತ್ತಾರೆ. ನಿಜ, ಇಸ್ಲಾಮ್ ಶಾಂತಿಯನ್ನು ಪ್ರತಿಪಾದಿಸುತ್ತದೆ, ಹಿಂಸೆಯನ್ನಲ್ಲ ಎಂದು ವಿವರಿಸುತ್ತಾರೆ. ಇದಕ್ಕೆ ಸಮರ್ಥನೆಯಾಗಿ ಕುರಾನಿನ ಸೂಕ್ತಿಗಳನ್ನು ಹದೀಸ್ (ಪ್ರವಾದಿಯವರ ಉಪದೇಶ ಹಾಗೂ ಸಂದೇಶಗಳು) ನೀಡಿ ಅದು ಹೇಗೆ ಹಿಂಸೆಗೆ ವಿರುದ್ಧವಾಗಿದೆ ಎಂದು ತೋರಿಸುತ್ತಾರೆ.

ಚಾರ್ಲಿ ಹೆಬ್ಡೊ ಮಾರಣಹೋಮದ ಘಟನೆಯ ನಂತರ 'ಇದು ನೈಜ ಇಸ್ಲಾಮ್ ಅಲ್ಲ' ಎಂಬ ಮಾತುಗಳನ್ನು ಮತ್ತೆ ಮತ್ತೆ ಕೇಳತೊಡಗಿದ್ದೇವೆ. ಹಾಗಿದ್ದರೂ, ಪ್ರವಾದಿಯವರಿಗೆ ಆದ ಅವಮಾನಕ್ಕೆ ಪ್ರತೀಕಾರವಾಗಿ ರಕ್ತದೋಕುಳಿ ಹರಿಸಿದವರು ಬಂದೂಕುಗಳನ್ನು ಹಿಡಿದುಕೊಂಡು 'ಅಲ್ಲಾಹು ಅಕ್ಬರ್' ಎಂದು ಕೂಗುತ್ತಿದ್ದರು ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ. ಮುಸ್ಲಿಮ್ ಬ್ರದರ್‌ಹುಡ್ ಸಂಘಟನೆಯ ಸ್ಥಾಪಕ ಹಸನ್ ಅಲ್ ಬಾನಾನ ಮೊಮ್ಮಗ ಹಾಗೂ ಖ್ಯಾತ ಮುಸ್ಲಿಮ್ ಚಿಂತಕ ತಾರೀಖ್ ರಹಮಾನ್ ಈ ಘಟನೆಯನ್ನು ಇಸ್ಲಾಮಿಕ್ ಮೂಲ ತತ್ವಗಳಿಗೆ ಮಾಡಿದ ಮಹಾದ್ರೋಹ ಎಂಬ ಕಟು ಶಬ್ದಗಳಲ್ಲಿ ಖಂಡಿಸಿದ. ಸೌದಿ ಅರೇಬಿಯಾದಲ್ಲಿ ವಹಾಬಿ ಇಸ್ಲಾಮ್ ಎಂಬ ಉಗ್ರವಾದಿ ಸಂಘಟನೆಯು ಇದು ಹೇಡಿಗಳ ಕೃತ್ಯ ಎಂದು ಖಂಡಿಸಿತು.

ಆದರೆ ಇಂಥ ಘಟನೆಗಳನ್ನು ಸುಮ್ಮನೆ ತಳ್ಳಿಹಾಕಲು ಸಾಧ್ಯವಿಲ್ಲ. ಪ್ರಪಂಚದಾದ್ಯಂತ ಇರುವ ಕೋಟಿಗಟ್ಟಲೆ ಮುಸ್ಲಿಮರು ಶಾಂತಿಯಿಂದ ಬದುಕುತ್ತಿದ್ದಾರೆ ಎಂಬುದು

ಸುಳ್ಳಲ್ಲ. ಅವರು ತಮ್ಮ ಮೇಲೆ ಆಗುತ್ತಿರುವ ನಿಜವಾದ -ಕಲ್ಪಿತ ದಬ್ಬಾಳಿಕೆಗಳ ಕಾರಣದಿಂದ ಇತರ ಧರ್ಮಗಳ ಮೇಲೆ ಪೂರ್ವಾಗ್ರಹಗಳನ್ನು ಸೃಷ್ಟಿಸಿಕೊಂಡು ಅವರೊಂದಿಗೆ ಬೆರೆತು ಬದುಕಲು ತಿರಸ್ಕರಿಸುತ್ತಿದ್ದರೂ ತಮ್ಮ ನಂಬಿಕೆಗಳಿಗೆ ವಿರುದ್ಧವಾಗಿರುವವರನ್ನೆಲ್ಲ ಕೊಂದು ಹಾಕಬೇಕು ಎಂದು ಹೇಳುವುದಿಲ್ಲ. ಬೇರೆಲ್ಲಾ ಧರ್ಮಗಳಂತೆ ಇಸ್ಲಾಮ್ ಸಹ ಹಿಂಸೆಯನ್ನು ಬೋಧಿಸುವುದಿಲ್ಲ. ಪ್ಯಾರಿಸ್ ಹತ್ಯಾಕಾಂಡವನ್ನು ಖಂಡಿಸುವ ಮುಸ್ಲಿಮರನ್ನು ಹುಡುಕಲು ಫಾಕ್ಸ್ ನ್ಯೂಸ್ ಕಷ್ಟಪಟ್ಟರೂ ಪ್ರಪಂಚಾದ್ಯಂತ ಮುಸ್ಲಿಮರು ಈ ಘಟನೆಯನ್ನು ಖಂಡಿಸಿದರು. ಆದರೆ ಈ ಹಿಂದೆ ಇಂಥ ಖಂಡನೆಗಳು ಕೆಲವು ಷರತ್ತುಗಳಿಗೆ ಒಳಪಟ್ಟಿರುತ್ತಿದ್ದವು. ಅದಕ್ಕೆ ಹೋಲಿಸಿದರೆ ಇದು ಮುಸ್ಲಿಮ್ ಜನಾಂಗದ ದೃಷ್ಟಿಕೋನದಲ್ಲಿ ಆಗಿರುವ ಬಹಳ ದೊಡ್ಡ ಬದಲಾವಣೆಯನ್ನು ಸೂಚಿಸುತ್ತದೆ.

ಆದರೆ, ನಿಜ ಮುಸ್ಲಿಮರಲ್ಲದವರೆಂದು – ನಿಜ ಇಸ್ಲಾಮನ್ನು ಪ್ರತಿನಿಧಿಸದವರೆಂದು ಹೇಳಲಾಗುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇಂಥವರ ಸಂಖ್ಯೆ ಪಶ್ಚಿಮ ಏಶ್ಯಾದಿಂದ ಹಿಡಿದು ಆಫ್ರಿಕಾ, ದಕ್ಷಿಣ ಏಶ್ಯಾ, ಯುರೋಪ್, ಅಮೇರಿಕಾದವರೆಗೆ ಹೆಚ್ಚುತ್ತಲೇ ಇದೆ. ಅಷ್ಟೇ ಏಕೆ, ಭಾರತದ ಮುಸ್ಲಿಮ್ ಯುವಕರೂ ಸಹ 'ಜೆಹಾದ್'ನಲ್ಲಿ ಭಾಗಿಯಾಗತೊಡಗಿದ್ದಾರೆ. ೯/೧೧ನ ಸಂದರ್ಭದಲ್ಲಿ ಒಂದೇ ಒಂದು ಅಲ್ ಖೈದಾ ಇದ್ದರೂ ಅದು ಅಮೆರಿಕಾದ ರಾಕ್ಷಸ ರಾಜಕಾರಣದ ವಿರುದ್ಧ ಹೋರಾಡುತ್ತಿತ್ತೇ ಹೊರತು ಅದು ಇಸ್ಲಾಮಿನ ಹೆಸರಿನಲ್ಲಿ ಅಲ್ಲ.

ಆದರೆ ಇಂದು ಪ್ರಪಂಚದ ಎಲ್ಲ ಕಡೆ ಇಸ್ಲಾಮಿಕ್ ಉಗ್ರರ ಸಂಘಟನೆಗಳು ನಾಯಿಕೊಡೆಗಳಂತೆ ಬೆಳೆದಿವೆ. ಬೋಕೋ ಹರಾಮ್, ಅಲ್ ಶಬಾಬ್, ಇಸ್ಲಾಮಿಕ್ ಸ್ಟೇಟ್, ಅಲ್ ಖೈದಾ, ನೂರಾರು ತರಹದ ತಾಲಿಬಾನ್, ಸಾವಿರಾರು ಲಷ್ಕರ್‌ಗಳು, ಮಿಲಿಟರಿ ತುಕಡಿಗಳು – ಒಂದು ಇನ್ನೊಂದಕ್ಕಿಂತ ಭಯಾನಕವಾಗಿವೆ. ಕಳೆದ ಒಂದು ತಿಂಗಳಲ್ಲೇ ಇಸ್ಲಾಮಿಕ್ ಉಗ್ರರಿಂದ ಹರಿದ ರಕ್ತದ ಹೊಳೆ ಎಲ್ಲರನ್ನೂ ತತ್ತರಿಸುವಂತೆ ಮಾಡಿದೆ – ಪೇಶಾವರದಲ್ಲಿ ನಡೆದ ೧೩೨ ಮುಗ್ಧ ಮಕ್ಕಳ ಮರಣಹೋಮ, ಸಿಡ್ನಿ ಕೆಫೆಯ ಮುತ್ತಿಗೆ, ಯೆಮೆನ್ ಮತ್ತು ಇರಾಕ್‌ನಲ್ಲಿ ನಡೆದ ಸಾಲು ಸಾಲು ಆತ್ಮಹತ್ಯಾದಳದ ಪಾತಕಗಳು, ಫಿಲಿಪೈನ್ಸ್‌ನಲ್ಲಿ ಬಸ್ಸೊಂದರ ಮೇಲೆ ನಡೆದ ಬಾಂಬ್ ದಾಳಿ, ನೈಜೀರಿಯಾದ ಬಾಗಾ ಪಟ್ಟಣದಲ್ಲಿ ಸುಮಾರು ೨,೦೦೦ ಕ್ಕೂ ಹೆಚ್ಚು ಜನರನ್ನು ಸಾಮೂಹಿಕವಾಗಿ ಕೊಂದ ದಾರುಣ ಘಟನೆ, ಐಸಿಸ್ ಉಗ್ರರಿಂದ ಇರಾಕ್ – ಸಿರಿಯಾಗಳಲ್ಲಿ ನಡೆಯುತ್ತಿರುವ ನಿರಂತರ ಹತ್ಯಾಕಾಂಡಗಳು – ಹೀಗೆ ಹಿಂಸೆಗೆ ಕೊನೆಯೆಂಬುದೇ ಇಲ್ಲ.

ಒಂದು ಧರ್ಮದವರು ಇನ್ನೊಂದು ಧರ್ಮಕ್ಕೆ ಸೇರಿದವರನ್ನು ಹೀಗೆ ನಿರಂತರವಾಗಿ ಕೊಲ್ಲುತ್ತಿರುವ ಉದಾಹರಣೆಗಳು ಎಲ್ಲಿಯಾದರೂ ಇವೆಯೇ?

ಯಾಕೆ ಇಸ್ಲಾಮ್ ಇಂಥ ಮಹಾಪಾತಕಿಗಳ ಪಡೆಯನ್ನು ಸೃಷ್ಟಿಸುತ್ತಿದೆ?

"ಇಸ್ಲಾಮ್‌ನ ಈ ಸಮಸ್ಯೆಯನ್ನು ಬಡತನ, ಹತಾಶೆಗಳ ಕೂಪದಲ್ಲಿ ಮುಳುಗಿದ ಜನರ ಸಮಸ್ಯೆಯೆಂದು ವಿವರಿಸುವ ಲೆನಿನ್‌ವಾದಿ ಸಮಾಜಶಾಸ್ತ್ರಜ್ಞರೆಂಬ ಪ್ರಯೋಜನಕಾರಿ ಮೂರ್ಖರ ವ್ಯಾಖ್ಯಾನವನ್ನು ಅಲ್ಲಗೆಳೆಯಬೇಕಾದ ಸಮಯವೀಗ ಬಂದಿದೆ" ಎಂದು ಫ್ರೆಂಚ್ ಚಿಂತಕ ಬರ್ನಾಡ್ ಲೆವಿಯವರು ಸಂಡೇ ಟೈಮ್ಸ್‌ನಲ್ಲಿ ಬರೆದ ಮಾತುಗಳ ಬಗ್ಗೆ ಗಂಭೀರವಾಗಿ ಆಲೋಚಿಸುವ ಸಂದರ್ಭ ಬಂದಿದೆ. ಚಾರ್ಲಿ ಹೆಬ್ಡೋ ಹತ್ಯಾಕಾಂಡದಲ್ಲಿ ಭಾಗಿಯಾದ ಇಬ್ಬರು ಸಹೋದರರ ಉದಾಹರಣೆಯನ್ನೇ ತೆಗೆದುಕೊಳ್ಳಿ. ಮುಖ್ಯವಾದ ಸಂಗತಿಯೇನೆಂದರೆ, ಇಸ್ಲಾಮಿಕ್ ಪಾಲಕರಾದ ಅವರು ತಾವು ಹಿಂಸಾಕೃತ್ಯಗಳನ್ನು ನಡೆಸುವಾಗ ಅಲ್ಲಾಹು ಅಕ್ಬರ್ ಎಂದು ಕೂಗುತ್ತ ಅದಕ್ಕೆ ಧಾರ್ಮಿಕ ಆಚರಣೆಯ ರೂಪ ನೀಡಿದ್ದಾರೆ. ಬಡ ಹಿಂದೂಗಳು, ಕ್ರಿಶ್ಚಿಯನ್ನರು, ಜ್ಯೂಗಳು ಸಹ ತಮ್ಮ ಕೃತ್ಯಗಳಿಗೆ ಧಾರ್ಮಿಕ ಸಮ್ಮತಿಯನ್ನಲ್ಲದಿದ್ದರೂ, ಧಾರ್ಮಿಕ ಪಠ್ಯವೊಂದರ ಸಮರ್ಥನೆಯನ್ನು ಮುಂದೊಡ್ಡಬಹುದು. ಆದರೆ ಈಗ ಏನಾಗುತ್ತಿದೆಯೋ ಅದು, ಪೂರ್ಣವಾಗಿ ಮುಸ್ಲಿಂ ಮತ್ತು ಇಸ್ಲಾಂನ ಸಮಸ್ಯೆ ಎಂಬ ಕಟು ಸತ್ಯವನ್ನು ಮುಸ್ಲಿಮರು ಈಗ ಎದುರಿಸಬೇಕಿದೆ.

"ನಾವು ಒಪ್ಪಲಿ ಬಿಡಲಿ ಉಗ್ರರಲ್ಲಿ ಬಹುಪಾಲು ಜನ ನಾವು ಮುಸ್ಲಿಮರು ಎಂದು ಗುರ್ತಿಸಿಕೊಳ್ಳುತ್ತಾರೆ. ಅಂಥವರನ್ನು ನಾವು ನಿಜ ಮುಸ್ಲಿಮರಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಯಾಕೆಂದರೆ ಅವರೇ ಹಾಗೆ ತಮ್ಮನ್ನು ಗುರ್ತಿಸಿಕೊಂಡಿದ್ದಾರೆ" ಎಂದು ಬ್ರಿಟನ್ನಿನ ಸಂಸ್ಕೃತಿ ಕಾರ್ಯದರ್ಶಿ ಸಾಜಿದ್ ಜಾವಿದ್ ಇತ್ತೀಚೆಗೆ ಹೇಳಿರುವುದನ್ನು ಗಮನಿಸಬೇಕು.

ಮುಖ್ಯ ಸಂಗತಿಗೆ ಬರುವುದಾದರೆ: ಇಸ್ಲಾಮಿಕ್ ಉಗ್ರವಾದ ಕೆಲವೇ ಕೆಲವು ಮತಿಹೀನ ಮುಸ್ಲಿಮರ ಕೆಲಸವೇ? ಅಥವಾ ಅದಕ್ಕೂ ಇಸ್ಲಾಮಿಗೂ ಯಾವ ಸಂಬಂಧವೂ ಇಲ್ಲವೇ? ಅಥವಾ ನ್ಯೂಯಾರ್ಕ್ ಟೈಮ್ಸ್‌ನ ಉದಾರವಾದಿ ಅಂಕಣಕಾರ ನಿಕೊಲಸ್ ಕ್ರಿಸ್ಟೋಫ್ ಕೇಳಿದಂತೆ "ಹಿಂಸೆ, ಉಗ್ರವಾದ, ಮಹಿಳಾ ಶೋಷಣೆಗೆ ಕಾರಣವಾಗುವ ಅಂಶಗಳು ಇಸ್ಲಾಮಿನಲ್ಲೇ ಇವೆಯೇ?"

ಹಾಗಾದರೆ ಇಸ್ಲಾಮ್ ಅಂದರೆ ಏನು? ವಿಶ್ವಾದ್ಯಂತ ಶಾಂತಿಯ ಮಾರ್ಗದಲ್ಲಿ ನಡೆಯುವ ಉಮ್ಮಾ ಯಾವ ಇಸ್ಲಾಮಿನ ತತ್ವಗಳಿಂದ ಸ್ಫೂರ್ತಿ ಪಡೆದಿದೆಯೋ ಅದೇ ಮೂಲದಿಂದ ರಕ್ತಪಿಪಾಸುವಾದ ಅಬೂಬಕರ್ ಅಲ್ ಬಗ್ದಾದಿ ಎಂಬ ಐಎಸ್‌ಐಎಸ್‌ನ ಸ್ವಘೋಷಿತ ಖಲೀಫನೂ ಸ್ಫೂರ್ತಿ ಪಡೆದಿರುವಾಗ ಆತನನ್ನು ಮುಸ್ಲಿಂ ಅಲ್ಲ ಎಂದು ಹೇಳುವುದು ಹೇಗೆ? ಒಳ್ಳೆಯ ಹಾಗೂ ಕೆಟ್ಟ ಇಸ್ಲಾಮಿಕ್ ಮೂಲಭೂತವಾದಿಗಳಿಬ್ಬರೂ ಕುರಾನ್-ಹದೀಸ್‌ಗಳಿಂದಲೇ ಪ್ರೇರಣೆ ಪಡೆದಿದ್ದಾರೆ

ಎಂದರೆ, ಸಮಸ್ಯೆಯಿರುವುದು ಅವುಗಳ ವ್ಯಾಖ್ಯಾನದಲ್ಲಿ ಹಾಗೂ ಇಂಥ ಸಂದಿಗ್ಧತೆಗಳೆಡೆ ಎಡೆ ಮಾಡಿಕೊಡುವ ಪವಿತ್ರ ಗ್ರಂಥಗಳಲ್ಲಿ.

ಕ್ರಿಸ್ಟೋಫ್‌ರ ಮಾತುಗಳನ್ನೇ ಉಲ್ಲೇಖಿಸುವುದಾದರೆ, "ಕೆಲವರು ಕುರಾನನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ನಾಶಮಾಡಿದರೆ, ಇನ್ನು ಕೆಲವರು ಅದನ್ನು ಓದಿ ಹೆಣ್ಣುಮಕ್ಕಳ ಶಾಲೆಗಳನ್ನು ಕಟ್ಟಿಸಿದ್ದಾರೆ. ತಾಲಿಬಾನ್‌ಗಳು ಇಸ್ಲಾಮಿನ ಒಂದು ಮುಖವನ್ನು ಪ್ರತಿನಿಧಿಸಿದರೆ, ಅದಕ್ಕೆ ಸಂಪೂರ್ಣ ವಿರುದ್ಧವಾದುದನ್ನು ಮಲಾಲಾ ಮಾಡಿತೋರಿಸುತ್ತಾಳೆ."

ಕುರಾನ್‌ನಲ್ಲಿರುವ ಹಲವು ಭಾಗಗಳು ಕೆಲವೊಮ್ಮೆ ಒಂದೇ ವಿಷಯದ ಬಗ್ಗೆ ಪರಸ್ಪರ ವಿರೋಧಾಭಾಸದ ಹಾಗೂ ಅಸ್ಪಷ್ಟವಾಗಿರುವುದರಿಂದ ಸಾಮಾನ್ಯ ಮನುಷ್ಯನಿಗೆ ಇದರಿಂದ ಗೊಂದಲ ಸೃಷ್ಟಿಯಾಗುತ್ತದೆ. ಇದರಿಂದ ಕೆಲವರು ತಮಗೆ ಅನುಕೂಲವಾದ ರೀತಿಯಲ್ಲಿ ಅದನ್ನು ವ್ಯಾಖ್ಯಾನಿಸುವ ಸಾಧ್ಯತೆ ಇದೆ. ಜೆಹಾದ್ ಅನ್ನು ಕುರಿತು ಏಕಕಾಲಕ್ಕೆ ಧರ್ಮಭ್ರಷ್ಟರು – ನೀಚರ ವಿರುದ್ಧ ಸಾರಬೇಕಾದ ಸಶಸ್ತ್ರ ಹೋರಾಟ ಎಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಅದನ್ನು ತನ್ನನ್ನು ತಾನು ನಿಗ್ರಹಿಸಿಕೊಳ್ಳಲು ನಡೆಯುವ ಶಾಂತಿಯುತ ಆಧ್ಯಾತ್ಮಿಕ ಸಂಘರ್ಷ ಎಂದೂ ಸಹ ಬಣ್ಣಿಸಲಾಗಿದೆ.

ಅಂದರೆ, ಇಸ್ಲಾಮ್ ಹೇಳಿದ ವಿಚಾರಗಳನ್ನೇ ಜೆಹಾದಿಗಳು ಕಾರ್ಯಗತಗೊಳಿಸುತ್ತಿರುವುದಾಗಿ ಹೇಳಿಕೊಳ್ಳುವುದರಿಂದ ಅವರು ಮಾಡುತ್ತಿರುವುದು ಅಕ್ಷರಶಃ ತಪ್ಪಲ್ಲ ಮತ್ತು ಹಾಗೆಯೇ ಅದೊಂದು ಆಂತರಿಕ ಆಧ್ಯಾತ್ಮಿಕ ಸಂಘರ್ಷವೆನ್ನುವವರ ವ್ಯಾಖ್ಯಾನವೂ ಸರಿಯೇ. ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಕುರಾನನ್ನು ವ್ಯಾಖ್ಯಾನಿಸಿಕೊಂಡು ಅದರ ಮೂಲ ಆಶಯವನ್ನು ಮರೆಮಾಚುತ್ತಾರೆ. ಹಾಗಾಗಿ ಇಸ್ಲಾಮ್ ಎಮ್ಮ ನಂಬಿಕೆಗಳು–ಧರ್ಮಗಳಿಗೆ ಸಮಾನ ಗೌರವ ನೀಡುತ್ತದೆ ಎಂಬ ಮಾತನ್ನು ಒಪ್ಪುವುದು ಕಷ್ಟ. ಉದಾಹರಣೆಗೆ ಅಲ್ ಬಖ್ರಾದ ಅಧ್ಯಾಯದಲ್ಲಿ ದೈವ ವಿಶ್ವಾಸಿಗಳು ವಿಶ್ವಾಸಿಗಳಲ್ಲದವರ ನಡುವಿನ ವ್ಯತ್ಯಾಸವನ್ನು ಸ್ಪಷ್ಟಗೊಳಿಸಿದರೆ, ನಂತರ ಅವರಿಗೆ ಅಂತಿಮ ತೀರ್ಮಾನದ ದಿನ ದೊಡ್ಡ ಶಿಕ್ಷೆಯೊಂದು ಕಾದಿದೆ ಎಂಬೆಚ್ಚರಿಕೆಯೂ ಇದೆ. ಮುಂದೆ, ದೇವರಿಗೆ ಮಾತ್ರ ಯಾರು ಶಿಕ್ಷಾರ್ಹರು ಎಂದು ನಿರ್ಧರಿಸುವ ಅಧಿಕಾರವಿದೆಯೇ ಹೊರತು ಹುಲುಮಾನವರಿಗೆ ಅಲ್ಲ ಎಂಬ ಮಾತುಗಳು ಇವೆ. ಹಾಗಾಗಿ ಉಗ್ರರು ಹಾಗೂ ಶಾಂತಿಪ್ರಿಯರು ಇಬ್ಬರೂ ಸಹ ತಮಗೆ ಬೇಕಾದ ಹಾಗೆ ಇಂಥ ಉಲ್ಲೇಖಗಳನ್ನು ಬಳಸಿಕೊಳ್ಳುವ ಸಾಧ್ಯತೆಯಿದೆ.

ಅದರಂತೆ, ಹೆಣ್ಣಿನ ಸ್ಥಾನಮಾನದ ಕುರಿತು, ಅಲ್ ನಿಸಾದ ಅಧ್ಯಾಯದಲ್ಲಿ ಅವರಿಗೆ ಸಮಾನ ಗೌರವವನ್ನು ನೀಡಬೇಕೆನ್ನುವ ಉಲ್ಲೇಖಗಳು ಇದ್ದರೂ ಅದಕ್ಕೆ ಹೊಂದಿಕೊಂಡಂತೆಯೇ ಹೆಣ್ಣು ಗಂಡಿಗೆ ಸರಿಸಮಾನಳಲ್ಲ ಎಂಬ ಅಭಿಪ್ರಾಯಗಳೂ ಸಹ ದೊರೆಯುತ್ತವೆ. ಗಂಡಿಗೆ ಹೋಲಿಸಿದರೆ, ಅವಳಿಗೆ ದೊರೆಯುವ ಆಸ್ತಿಯ

ಪಾಲು ಕಡಿಮೆ ಮತ್ತು ಅವಳು ಹೇಳುವ ಸಾಕ್ಷ್ಯಕ್ಕೆ ಅಷ್ಟು ಬೆಲೆ ನೀಡಬಾರದು. ಹಾಗೆಯೇ ವ್ಯಭಿಚಾರದ ಸಂದರ್ಭದಲ್ಲಿ ಆಕೆಗೆ ಗಂಡಿಗಿಂತ ಹೆಚ್ಚಿನ ಶಿಕ್ಷೆ ದೊರೆಯಬೇಕು ಎಂಬ ಮಾತುಗಳು ದೊರೆಯುತ್ತವೆ.

ನಿಜವಾಗಿ, ಕುರಾನಿನ ಸೂಕ್ತಿಗಳನ್ನು ಯಾವುದೇ ಸಂದರ್ಭಕ್ಕೆ ಅನ್ವಯವಾಗುವ ಹಾಗೆ ವಿವಿಧ ಅಧ್ಯಾಯಗಳಲ್ಲಿ ಜೋಡಿಸಿರುವ ಕ್ರಮದಲ್ಲಿಯೇ ಸಮಸ್ಯೆಯಿದೆ. ಹಾಗಾಗಿ ಅವುಗಳನ್ನು ಬಿಡಿಬಿಡಿಯಗಿ ಓದಿದಾಗ ಅವು ಪರಸ್ಪರ ವಿರೋಧಾಭಾಸದ ವ್ಯಾಖ್ಯಾನಗಳಿಗೆ ಕಾರಣವಾಗುತ್ತವೆ.

ಭಾರತದ ಬಹಳ ಮುಖ್ಯ ಇಸ್ಲಾಮಿಕ್ ಚಿಂತಕರಾದ ಮೌಲಾನಾ ವಹೀದುದ್ದೀನ್ ಖಾನ್ ಅವರು ಕುರಾನಿನ ಇಂಗ್ಲಿಷ್ ಅನುವಾದಕ್ಕೆ ಬರೆದ ಮುನ್ನುಡಿಯ ಪ್ರಕಾರ "ಮುಖ್ಯವಾದ ಸಂಗತಿಯೇನೆಂದರೆ, ಈಗ ದೊರಕುವ ಕುರಾನ್ ಪೂರ್ಣಪ್ರಮಾಣದಲ್ಲಿ ಒಮ್ಮೆಗೇ ಅವತೀರ್ಣಗೊಳ್ಳಲಿಲ್ಲ. ಅದು ಕಾಲಕಾಲಕ್ಕೆ ವಿವಿಧ ಸಂದರ್ಭಗಳಲ್ಲಿ ಸುಮಾರು ೨೩ ವರ್ಷಗಳ ಅವಧಿಯಲ್ಲಿ ಅವತೀರ್ಣಗೊಂಡಿತು". ಅವರ ಪ್ರಕಾರ "ಕುರಾನ್ ಇತರ ಧಾರ್ಮಿಕ ಪಠ್ಯಗಳಂತೆ ಒಂದು ನಿರ್ಧಿಷ್ಟ ಸ್ವರೂಪವನ್ನು ಹೊಂದಿರದೆ, ಅದು ಬಿಡಿಬಿಡಿಯಾದ ಹೇಳಿಕೆಗಳನ್ನೊಳಗೊಂಡ ಸಂಗ್ರಹವಾಗಿದೆ. ಓದುಗರು ಈ ಗ್ರಂಥದ ಬಿಡಿ ಪುಟಗಳು, ಸೂಕ್ತಿಗಳನ್ನು ಓದಿಕೊಳ್ಳಲು ಅನುಕೂಲವಾಗುವಂತೆ ಅದರ ಸ್ವರೂಪವನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ".

ಪ್ರವಾದಿಯವರ ಉಪದೇಶಗಳು-ಸಂದೇಶಗಳನ್ನೊಳಗೊಂಡ ಹದೀಸ್‌ನ ಸಮಸ್ಯೆಯೂ ಇದೇ ಆಗಿದೆ. ಈ ಸಂದೇಶಗಳು ಹಲವು ರೂಪಗಳಲ್ಲಿ, ಅವುಗಳು ಹಲವು ಸಂದರ್ಭಗಳಿಗೆ ಸಂಬಂಧಿಸಿದ್ದು ಅವುಗಳನ್ನು ಪ್ರವಾದಿಯವರ ಸಾವಿನ ಹಲವು ವರ್ಷಗಳ ನಂತರ ಸಂಗ್ರಹಿಸಲಾಯಿತು. ಅವುಗಳ ಮೂಲ ಅರ್ಥ ಅನುವಾದ ಮಾಡುವಾಗ ಕಳೆದುಹೋಗಿದೆ. ಆದರೂ ಮೂಲಸಂದರ್ಭವನ್ನು ಕಡೆಗಣಿಸಿ ಅವುಗಳನ್ನು ಬಹಳ ಸಡಿಲವಾಗಿ ಉಲ್ಲೇಖಿಸಲಾಗುತ್ತದೆ. ನಿಜವಾಗಿ ಪ್ರವಾದಿಯವರಿಗೆ ಸಂಬಂಧಿಸದೇ ಇರುವ ಹಲವು ಹದೀಸ್‌ಗಳೂ ಸಹ ಬಳಕೆಯಲ್ಲಿವೆ.

ಮುಖ್ಯವಾದ ಸಂಗತಿಯೇನೆಂದರೆ, ಉಗ್ರರು ತಾವು ಮಡುತ್ತಿರುವ ಕೆಲಸಗಳಿಗೆ ಸಮರ್ಥನೆಯಾಗಿ ಇಸ್ಲಾಮ್‌ನ ಹೊಸದೊಂದು ಆವೃತ್ತಿಯನ್ನು ಹುಡುಕಬೇಕಾಗಿ ಬರಲಿಲ್ಲ ಎನ್ನುವುದು. ಅಂಥ ಅಂಶಗಳನ್ನು ಅವರು ಈಗಾಗಲೇ ಇಸ್ಲಾಮಿನಲ್ಲಿ ಹುಡುಕಿಕೊಂಡಿದ್ದರು. ಹಾಗೆ ಅಲ್ಲಿ ಇಲ್ಲಿ ಚದುರಿದಂತಿದ್ದ ಅಂಶಗಳನ್ನು ಅವರು ತಮ್ಮ ಅಜೆಂಡಾಗೆ ಸರಿಯಾಗಿ ಹೊಂದಿಸಿಕೊಂಡು ಅದನ್ನೇ ನೈಜ ಇಸ್ಲಾಮ್ ಎಂದು ಪ್ರದಿಪಾದಿಸಿದರು.

ಮುಸ್ಲಿಮರಿಗೆ ಈ ಸಮಸ್ಯೆಯ ಅರಿವಿದೆಯಾದರೂ, ಅದರ ಜೊತೆಗೇ ಅವರು ಕುರಾನ್ ಯಾವ ಬದಲವಣೆಗೂ ಒಳಪಡಿಸಬಾರದ, ಯಾವ ಹಸ್ತಕ್ಷೇಪಕ್ಕೂ

ಒಳಗಾಗಕೂಡದ ಗ್ರಂಥ ಎಂದು ಹೇಳಲು ಹಿಂಜರಿಯುವುದಿಲ್ಲ. ಕುರಾನ್ ಸಹ ಇದನ್ನು ಬಹಳ ಸ್ಪಷ್ಟವಾಗಿ ಹೇಳುತ್ತದೆ "ಯಾರಿಗಾಗಿ ಈ ಪುಸ್ತಕವನ್ನು ನೀಡಲಾಗಿದೆಯೋ ಅವರು ಅದನ್ನು ಪಾಲಿಸಬೇಕು. ಅದರಲ್ಲಿ ನಂಬಿಕೆಯಿಡುವವರು ಗೆಲ್ಲುವರು, ನಂಬಿಕೆಯಿಲ್ಲದವರು ಸೋಲುವರು".

ಹೀಗಿರುವಾಗ ಕುರಾನಿನ ಸೂಕ್ತಿಗಳನ್ನು ಸಂದರ್ಭಾನ್ವಯಗೊಳಿಸಿ ಮರುಜೋಡಿಸುವ ಯಾವುದೇ ಪ್ರಯತ್ನವನ್ನು ಧರ್ಮಪಾತಕ ಪ್ರಯತ್ನವೆಂದು ತಿರಸ್ಕರಿಸಲಾಗುತ್ತದೆ. ಹೊಸ ಒಡಂಬಡಿಕೆಯ ಹಾಗೆ ಇಸ್ಲಾಮಿನಲ್ಲೂ ಮರುನಿರೂಪಣೆಯ ಅಗತ್ಯವಿದೆ ಎಂಬ ಮಾತನ್ನು ನಾನು ಲೇಖನವೊಂದರಲ್ಲಿ ಬರೆದಾಗ, ಕೆಲವರು ಇದೇ ಮಾತನ್ನು ಇಸ್ಲಾಮಿಕ್ ದೇಶವೊಂದರಲ್ಲಿ ಹೇಳಿದ್ದರೆ ಧರ್ಮದ್ರೋಹದ ಆಪಾದನೆಯನ್ನು ಎದುರಿಸಬೇಕಾಗಿತ್ತು ಎಂದು ನನಗೆ ಎಚ್ಚರ ನೀಡಿದರು. ಈ ರೀತಿಯ ಸಂಪ್ರದಾಯಸ್ಥ, ಹಿಂಸಾತ್ಮಕವಾದ ಪ್ರಕ್ರಿಯೆಗಳು ಇಸ್ಲಾಮಿಗೆ ಹೊಸದೇನಲ್ಲ. ಕ್ರಿಶ್ಚಿಯಾನಿಟಿಯಲ್ಲಿಯೂ ಒಮ್ಮೆ ಇಂಥ ಬೆಳವಣಿಗೆ ಉಂಟಾಗಿತ್ತು. ಮಧ್ಯಯುಗದಲ್ಲಿ ಪೇಗನ್ ಸಂಪ್ರದಾಯಕ್ಕೆ ಸೇರಿದ ಯೂರೋಪನ್ನು ಕ್ರಿಶ್ಚಿಯನೀಕರಣಗೊಳಿಸುವಾಗ ಅದಕ್ಕೆ ಹಿಂಸಾತ್ಮಕವಾದ ಪ್ರತಿಕ್ರಿಯೆಗಳು, ಕ್ರುಸೇಡ್‌ಗಳು ನಡೆದವು. ಕ್ರಿಶ್ಚಿಯಾನಿಟಿ ಇದನ್ನು ನಿಯಂತ್ರಿಸಿತಾದರೆ, ಇಸ್ಲಾಂ ಈಗ ಹಾಗೆ ಮಾಡಲು ವಿಫಲವಾಗಿದೆ. ಜ್ಞಾನೋದಯ (Enlightnment) ಮತ್ತು ಪುನರುಜ್ಜೀವನ (Renaissance) ಎಂಬ ಶಬ್ದಗಳಿಗೆ ಸಮಾನ ಆಧುನಿಕ ಇಸ್ಲಾಮೀ ಶಬ್ದಗಳೇ ಇಲ್ಲ. ಅದು ಇಂದಿಗೂ ಆಧುನಿಕತೆಯ ವಿರುದ್ಧ ಹೆಜ್ಜೆ ಹಾಕಿ ಗಾಬರಿ ಹುಟ್ಟಿಸುತ್ತಿದೆ. ಇಂಥ ವೈಚಾರಿಕ ಪ್ರಯತ್ನಗಳಿಗೆ ಇಂಬುನೀಡುವ ಮುತಜಿಲ್ಲಾ ಚಳುವಳಿಯನ್ನು ಮೂಲಭೂತವಾದಿ ಮುಸ್ಲಿಮರು ನಾಶಮಾಡಿದರು. ಮುತಜಿಲ್ಲಾ ಚಳುವಳಿಯು ಇಂದಿನ ಜೀವನದ ಅಗತ್ಯಗಳಿಗೆ ಸ್ಪಂದಿಸುವಂತಹ ರೀತಿಯಲ್ಲಿ ಕುರಾನನ್ನು ಒಂದು ಜೀವಂತ ಪಠ್ಯವಾಗಿ ಮಾಡುವ ಅಗತ್ಯವನ್ನು ಒತ್ತಿಹೇಳಿತ್ತು.

ಅದಕ್ಕಾಗಿಯೇ "ನಾವು ೩ನೆಯ ಅಥವಾ ೪ನೆಯ ಶತಮಾನದಲ್ಲಿಯೋ ಬದುಕುತ್ತಿಲ್ಲ. ಮನುಷ್ಯನ ಪ್ರಜ್ಞೆ-ವೈಚಾರಿಕತೆಗಳು ಬಹಳ ವ್ಯಾಪಕವಾಗಿ ಬದಲಾವಣೆ ಹೊಂದಿದ್ದು ನಾವು ದೇವರು ದಯಪಾಲಿಸಿರುವ ವಿವೇಚನಾ ಶಕ್ತಿಯನ್ನು ಇನ್ನಷ್ಟು ನಿಜವಾದ ಸಂಗತಿಗಳನ್ನು ಹುಡುಕಲು ಬಳಸಿಕೊಳ್ಳಬೇಕಾಗಿದೆ" ಎಂದು ದೆಹಲಿಯ ಮಹಮ್ಮದ್ ಯೂನುಸ್ ಎಂಬ ಇಸ್ಲಾಮಿಕ್ ಚಿಂತಕರು ಹೇಳಿದ್ದು ಬಹಳ ಪ್ರಸ್ತುತವಾಗಿದೆ. ಈ ಮಧ್ಯೆ ಈಜಿಪ್ಟ್‌ನ ಅಧ್ಯಕ್ಷ ಅಬ್ದೆಲ್ ಫತಾ ಅಲ್ ಸಿಸಿ ಇಸ್ಲಾಮನ್ನು ಉಗ್ರರ ಹಾವಳಿಯಿಂದ ರಕ್ಷಿಸಲು ಧಾರ್ಮಿಕ ಕ್ರಾಂತಿಗೆ ಅಣಿಯಾಗಬೇಕೆಂದು ಕರೆ ನೀಡಿದ್ದಾನೆ. ಸುನ್ನಿ ಜ್ಞಾನ ಅಧ್ಯಯನಕ್ಕೆ ಮೀಸಲಾಗಿರುವ ಅಲ್ ಅಜರ್ ವಿಶ್ವವಿದ್ಯಾನಿಲಯದ ಪಂಡಿತರನ್ನು ಕುರಿತು ಮಾತನಾಡುತ್ತ ಆತ ಹೇಳಿದ: "ನಮಗೀಗ ಧಾರ್ಮಿಕ ಕ್ರಾಂತಿಯೊಂದರ ಅಗತ್ಯವಿದೆ ಎಂಬುದನ್ನು ಸಾರಿ ಸಾರಿ ಹೇಳಬೇಕಾಗಿದೆ. ನೀವು

ಇಮಾಂಗಳು ದೇವರಿಗೆ ಜವಾಬ್ದಾರರು. ಇಸ್ಲಾಮಿಕ್ ಪ್ರಪಂಚವು ತನ್ನೊಳಗೆ ತಾನೇ ಛಿದ್ರಗೊಳ್ಳುತ್ತ, ದಿನೇ ದಿನೇ ನಮ್ಮವರಿಂದಲೇ ನಾಶವಾಗುತ್ತಿರುವುದನ್ನು ಪ್ರಪಂಚ ನೋಡುತ್ತಿದೆ".

ವ್ಯಂಗ್ಯವೇನೆಂದರೆ ಇಂಥ ಮಾತುಗಳನ್ನು ಆಡುತ್ತಿರುವ ಹೊತ್ತಿನಲ್ಲಿಯೇ ಈಜಿಪ್ಟ್‌ನ ನ್ಯಾಯಾಲಯವೊಂದು ಕರೀಮ್ ಅಲ್ ಬನ್ನಾ ಎಂಬ ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಫೇಸ್‌ಬುಕ್‌ನಲ್ಲಿ ತನಗೆ ಧರ್ಮಗಳಲ್ಲಿ ನಂಬಿಕೆ ಇಲ್ಲ ಎಂದು ಬರೆದದ್ದನ್ನು ಇಸ್ಲಾಮ್‌ಗೆ ಅಗೌರವ ಎಂದು ಪರಿಗಣಿಸಿ ಮೂರು ವರ್ಷಗಳ ಶಿಕ್ಷೆ ವಿಧಿಸಿದೆ. ಫಾತಿಮಾ ನೌತ್ ಎಂಬ ಲೇಖಕಿ ಈದ್‌ನ ಸಂದರ್ಭದಲ್ಲಿ ಕುರಿಗಳನ್ನು ಬಲಿ ನೀಡುವ ಪದ್ಧತಿಯನ್ನು ವಿರೋಧಿಸಿದ್ದಕ್ಕೆ ಆಕೆಯ ಮೇಲೆ ಮೊಕದ್ದಮೆಯೊಂದನ್ನು ಹೂಡಲಾಗಿದೆ. ಕವಿ ಕರೀಮ್ ಸಬ್ರೆ 'ದೇವರು ಎಲ್ಲಿದ್ದಾನೆ?' ಎಂಬ ಕತೆಯೊಂದನ್ನು ಬರೆದಿದ್ದಕ್ಕಾಗಿ ಜೈಲಿನಲ್ಲಿದ್ದಾನೆ.

ಸರಿಯಾಗಿ ಗುರಿ ಇಟ್ಟು ಹೇಳುವುದಾದರೆ, ಇಸ್ಲಾಮ್‌ನ ಈ ಬಿಕ್ಕಟ್ಟನ್ನು ದಿಟ್ಟವಾಗಿ ಎದುರಿಸುವ ಕಾಲ ಮುಸ್ಲಿಮರಿಗೆ ಈಗ ಎದುರಾಗಿದೆ. ಇಲ್ಲದಿದ್ದರೆ, ೯/೧೧ ಸಂದರ್ಭದಲ್ಲಿ ಇರ್ಶಾದ್ ಮಾಂಝಿ ಎಂಬ ಕೆನಡಿಯನ್ ಮಹಿಳೆ ೨೦೦೩ರಲ್ಲಿ ಬರೆದ 'ದ ಟ್ರಬಲ್ ವಿತ್ ಇಸ್ಲಾಮ್ ಟುಡೇ' ಎಂಬ ಪುಸ್ತಕದಲ್ಲಿನ ಮಾತುಗಳನ್ನು ಬಳಸಿ ಹೇಳುವುದಾದರೆ ಪ್ಯಾರಿಸ್ ಹಂತಕರು 'ತಮ್ಮ ಪ್ರದರ್ಶನ ಕೊಟ್ಟು ಹಾಯಾಗಿ ಹೋಗಿಬಿಡುತ್ತಾರೆ' 'ಸಹಧರ್ಮೀಯ ಮುಸ್ಲಿಮರು ತಾವು ನಿರ್ಯೋಚನೆಯಿಂದ ಸಮರ್ಥಿಸುವ ಇಸ್ಲಾಂ ಬಗ್ಗೆ ಪುನರಾವಲೋಕನ ಮಾಡುವ' ಸವಾಲಿದೆ ಎನ್ನುವ ಅವರು, 'ಇಸ್ಲಾಂನಲ್ಲಿ ಯಾವ ಸಮಸ್ಯೆಯೂ ಇಲ್ಲ ಎನ್ನುವವರು ವಾಸ್ತವವನ್ನು ಚಾಪೆಯ ಕೆಳಕ್ಕೆ ಗುಡಿಸುತ್ತಿದ್ದಾರೆ' ಎಂದು ಅಭಿಪ್ರಾಯಪಟ್ಟು 'ನಮ್ಮ ಆತ್ಮದ್ರೋಹದಿಂದ ನಾವು ಹೊರಬರಬೇಕಿದೆ' ಎಂದು ಆಗ್ರಹಿಸಿದ್ದಾರೆ. ಇಂತಹ ವಿಮರ್ಶಾತ್ಮಕ ಸಾಲುಗಳನ್ನು ಬರೆದಿದ್ದಕ್ಕಾಗಿ ಆಕೆಯನ್ನು 'ಸ್ಕರ್ಟ್ ತೊಟ್ಟ ಸಲ್ಮಾನ್ ರಶ್ದಿ' ಎಂದು ಹೀಗಳೆಯಲಾಗಿದೆ. ಚಾರ್ಲಿ ಹೆಬ್ಡೋ ಘಟನೆಯ ನಂತರ ಇದು ಬಹಳ ದಿನೇ ಹೀಗೇ ಮುಂದುವರೆಯಲಾರದು ಎಂದು ಮುಸ್ಲಿಮರಿಗೆ ಮನವರಿಕೆಯಾಗಿದೆ. ಆದರೂ, ಧೈರ್ಯವಾಗಿ ಮಾತಾಡಲು ಅವರು ಇನ್ನು ಹಿಂಜರಿಯುತ್ತಿದ್ದಾರೆ; ಈ ಹಿಂಜರಿಕೆ ಮುಂದುವರೆದಷ್ಟೂ ಇಸ್ಲಾಂಗೆ ಅಪಾಯ ಹೆಚ್ಚುತ್ತಾ ಹೋಗುತ್ತದೆ. ಇಸ್ಲಾಮನ್ನು ಕುರಿತು ಈ ಬಗೆಯ ಪ್ರಶ್ನೆಗಳನ್ನು ಕೇಳದಿದ್ದರೆ ಮತ್ತು ಕೇಳಲು ಎಷ್ಟು ವಿಳಂಬ ಮಾಡಲಾಗುತ್ತದೋ ಅದರಿಂದ ಅಷ್ಟೂ ಹೆಚ್ಚು ಹಾನಿಯಾಗಲಿದೆ ಎಂಬುದನ್ನು ಅರಿಯಬೇಕಿದೆ. ಒಂದು ಇಸ್ಲಾಮೀ ಪುನರುಜ್ಜೀವನ ಬಯಸುವವರು ಯಾರಾದರೂ ಇದ್ದಾರಾ?

**ಸಾಭಾರ : ಹೊಸ ಮನುಷ್ಯ**

# ಬದನವಾಳು ಸತ್ಯಾಗ್ರಹ

## ಒಂದು ಅನಿಸಿಕೆ, ಒಂದು ಸಲಹೆ

– ಸುರೇಂದ್ರ ಕೌಲಗಿ

ಬದನವಾಳು ಸತ್ಯಾಗ್ರಹ ಎಂಬ ಹೆಸರಿನಲ್ಲಿ ಸುಸ್ಥಿರ ಬದುಕಿನ ಅಗತ್ಯತೆಯ ಬಗ್ಗೆ ಸಮಸ್ತ ಸಮಾಜದ ಮತ್ತು ಪ್ರಭುತ್ವದ ಗಮನ ಸೆಳೆಯಲು ಇಲ್ಲಿ ರಾಷ್ಟ್ರೀಯ ಸಮಾವೇಶ ಏರ್ಪಾಟುಗೊಂಡಿದೆ. ಶ್ರಮಸಹಿತ ಸುಸ್ಥಿರ ಜೀವನ ಮಾರ್ಗಕ್ಕಾಗಿ ಜಗತ್ತಿನಾದ್ಯಂತ, ವಿಶೇಷವಾಗಿ ಭಾರತದಲ್ಲಿ ಬಹುದೊಡ್ಡ ಜನತಾ ಚಳುವಳಿ ನಡೆಯಬೇಕಿದೆ. ಇದು ೨೧ನೇ ಶತಮಾನದ ಕರೆಯೂ ಆಗಿದೆ ಮತ್ತು ಧರ್ಮವೂ ಆಗಿದೆ.

ಬದನವಾಳು ರಾಷ್ಟ್ರೀಯ ಸಮಾವೇಶದ ಆಶಯ ನೆರವೇರಬೇಕಾದರೆ ರಾಜ್ಯಶಕ್ತಿಯ ಮೇಲೆ ಲೋಕಶಕ್ತಿಯ ಅಂಕುಶ ಇರಬೇಕಾದುದು ಬಲುಅಗತ್ಯ. ಜನತೆ ಸರಳ ಮತ್ತು ಸುಸ್ಥಿರ ಬದುಕನ್ನು ಬಹಳ ತೀವ್ರವಾಗಿ ಬಯಸುತ್ತಿರುವಾಗ ಪ್ರಭುತ್ವ ಅದಕ್ಕೆ ವಿರುದ್ಧವಾದ ನೀತಿಯನ್ನು ಅನುಸರಿಸುತ್ತಿದ್ದರೆ ಜನರು ಅನುಸರಿಸಲು ಬಯಸುವ ಸುಸ್ಥಿರ ಬದುಕನ್ನು ನಡೆಸಲು ಕಷ್ಟಸಾಧ್ಯವಾಗುತ್ತದೆ. ಜನತೆಯ ಇಚ್ಛೆ ಒಂದು ಬಗೆಯಾಗಿದ್ದು, ಪ್ರಭುತ್ವದ ಇಚ್ಛೆ ಇನ್ನೊಂದು ಬಗೆಯದಾದರೆ ಅಶಾಂತಿಗೆ ಕಾರಣವಾಗುತ್ತದೆ. ಆದ್ದರಿಂದ ಜನತೆಯ ಇಚ್ಛೆಗೆ ಪ್ರಭುತ್ವ ಪೂರಕವಾಗಿ ಕೆಲಸಮಾಡುವಂತೆ ಮಾಡಬೇಕಾದುದು ಈ ಸಮಾವೇಶದ ಮುಂದಿರುವ ದೊಡ್ಡ ಸವಾಲೆಂದು ನಾನು ಭಾವಿಸುತ್ತೇನೆ.

ಇಂದಿನ ಸರ್ಕಾರ ಯಂತ್ರ ನಾಗರೀಕತೆಗೆ ಹೆಚ್ಚು ಒತ್ತು ಕೊಡುತ್ತಿದೆ. ವಿದೇಶಗಳಲ್ಲಿಯ ಬೃಹತ್ ಕೈಗಾರಿಕಾ ಕಂಪೆನಿಗಳಿಗೆ ಭಾರತದಲ್ಲಿ ಬಂಡವಾಳ ಹೂಡಲು ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲು ಕೆಂಪು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದೆ.

'ಭಾರತದಲ್ಲಿ ತಯಾರಿಸಿ' ಎಂಬ ನೀತಿಯ ಮೇರೆಗೆ ಭಾರತಕ್ಕೆ ಬರಲಿರುವ ವಿದೇಶೀ ಕೈಗಾರಿಕಾ ಕಂಪನಿಗಳಿಗೆ ತೆರಿಗೆಯಲ್ಲಿ ವಿನಾಯಿತಿ, ಆಮದು-ರಫ್ತು ಸುಂಕಗಳಲ್ಲಿ ರಿಯಾಯಿತಿ, ವಿದ್ಯುತ್ ಪೂರೈಕೆಯಲ್ಲಿ ರಿಯಾಯಿತಿ, ಭೂಸ್ವಾಧೀನತೆಯ ಪ್ರಕ್ರಿಯೆಯಲ್ಲಿ ರಿಯಾಯಿತಿ, ಗ್ರಾಮಗಳಿಂದ ಯುವಶಕ್ತಿಯನ್ನು ನಗರಗಳಿಗೆ ಓಡಿಸುವಿಕೆ ಮುಂತಾದ ಕ್ರಮಗಳಿಂದ ನಮ್ಮ ಇಂದಿನ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಸಮಾವೇಶದ ಪ್ರಮುಖ ಆಶಯಗಳಾದ ಕೈ ಮಗ್ಗ ವಸ್ತ್ರ ನಾಳಿನ ವಸ್ತ್ರ; ಪಾರಂಪರಿಕ ಕೃಷಿ ನಾಳಿನ ಕೃಷಿ; ಮಾತೃಭಾಷೆ ನಾಳಿನ ಭಾಷೆ; ವಿಕೇಂದ್ರೀಕರಣ ನಾಳಿನ ರಾಜಕಾರಣ ಮುಂತಾದವುಗಳು ನೆರವೇರುವುದು ದಿನಗಳುರುಳಿದಂತೆ ಬಹು ಕಷ್ಟವಾಗಲಿದೆ. ರಾಷ್ಟ್ರೀಯ ಸಮಾವೇಶದ ಈ ಆಶಯಗಳ ಕ್ರೋಢೀಕೃತ ನೀತಿಯನ್ನು 'ಲೋಕನೀತಿ' ಎಂದು ಕರೆಯಬಹುದಾಗಿದೆ.

ಲೋಕನೀತಿಯ ಬಲಸಂವರ್ಧನೆಯ ಕೆಲಸ ತುರ್ತಾಗಿ ಆಗಬೇಕಿದೆ. ಮತದಾರರೂ ಆಗಿರುವ ನಾವು ಸಹಮತದಾರರಲ್ಲಿ ಈ ವಿಷಯದ ಬಗ್ಗೆ ಜಾಗೃತಿ ಮೂಡಿಸಬೇಕು.

ಜಾಗೃತಿ ಮೂಡಿಸುವ ಕಾರ್ಯ ಒಂದು ಚಳುವಳಿಯ ರೂಪದಲ್ಲಿಯೇ ನಡೆಯಬೇಕು. ಜಾಗೃತಿ ಚಳುವಳಿ ಎಷ್ಟು ಬಿರುಸಾಗಿ ಮತ್ತು ಪರಿಣಾಮಕಾರಿಯಾಗಿ ನಡೆಯಬೇಕೆಂದರೆ ೨೦೧೯ರಲ್ಲಿ ನಡೆಯಲಿರುವ ಮಹಾ ಚುನಾವಣೆಯಲ್ಲಿ 'ಲೋಕನೀತಿ'ಗೆ ವಿರುದ್ಧವಾದ ಸರ್ಕಾರವನ್ನು ತೆಗೆದುಹಾಕಿ 'ಲೋಕನೀತಿ' ಗೆ ಪರವಾದ ಸರ್ಕಾರವನ್ನು ಅಧಿಕಾರದಲ್ಲಿ ಪ್ರತಿಷ್ಠಾಪಿಸುವಂತಾಗಬೇಕು. ಆಗ ಮಾತ್ರ ಈ ರಾಷ್ಟ್ರೀಯ ಸಮಾವೇಶದ ಆಶಯಗಳಿಗೆ ಶಕ್ತಿ ಬರಲು ಮತ್ತು ಕಾರ್ಯಸಾಧುವಾಗಲು ಸಾಧ್ಯವಾಗುತ್ತದೆ. ಅರ್ಥಾತ್ ೧೯೭೫ರ ತುರ್ತುಪರಿಸ್ಥಿತಿಯ ಕಾಲದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣರು ಹೂಡಿದ್ದ ಸಂಪೂರ್ಣ ಕ್ರಾಂತಿಯಲ್ಲಿಯ ವಿಚಾರಗಳನ್ನು ಮತ್ತೆ ಜನತೆಯಲ್ಲಿ ಬಿತ್ತುವ ಕೆಲಸವನ್ನು ಮಾಡಬೇಕಿದೆ.

ಈ ರಾಷ್ಟ್ರೀಯ ಸಮಾವೇಶದ ಗೊತ್ತುಗುರಿಗಳಿಗೆ ರಾಜಕೀಯ ಹಲ್ಲನ್ನು ಜೋಡಿಸಬೇಕಿದೆ. ಆದರೆ ಆ ರಾಜಕೀಯ ಶಕ್ತಿ ಪಕ್ಷಾತೀತವಾದುದೂ, ಎಲ್ಲರನ್ನೂ ಒಳಗೊಂಡುದೂ ಮತ್ತು ರಾಜ್ಯಶಕ್ತಿಯನ್ನು ಕಡಿಮೆಗೊಳಿಸಿ ಲೋಕಶಕ್ತಿಯನ್ನು ಬಲಗೊಳಿಸುವಂತದ್ದೂ ಆಗಿರಬೇಕು.

ನೂರು ವರ್ಷಗಳ ಹಿಂದೆ ಮಹಾತ್ಮಾಗಾಂಧೀಜಿಯವರು ಯಾವ ವಿಚಾರಗಳನ್ನು ತಮ್ಮ 'ಹಿಂದ್ ಸ್ವರಾಜ್' ಪುಸ್ತಕದ ಮೂಲಕ ಜಗತ್ತಿನ ಮುಂದೆ ಇಟ್ಟಿದ್ದರೊ ಆ ವಿಚಾರಗಳನ್ನು ಸಾಕಾರಗೊಳಿಸುವ ಶಕ್ತಿ ಈ ರಾಷ್ಟ್ರೀಯ ಸಮಾವೇಶಕ್ಕೆ ಬರಬೇಕಿದೆ. ಅಂತಹ ಶಕ್ತಿ ಬರಬೇಕಾದರೆ ಗಾಂಧೀಜಿಯವರು ಜನತಾಶಕ್ತಿಯ ಬಲಸಂವರ್ಧನೆಗಾಗಿ ಹೇಳಿದ್ದ ಮಾರ್ಗಗಳಾದ ಹರತಾಳ, ಅಸಹಕಾರ, ಬಹಿಷ್ಕಾರ, ಪಿಕೆಟಿಂಗ್, ಕರನಿರಾಕರಣೆ, ಸತ್ಯಾಗ್ರಹ ಹಾಗೂ ಆಮರಣ ಉಪವಾಸದಂತಹ ಅಹಿಂಸಕ ಹೋರಾಟದ ಮಾರ್ಗವನ್ನು ಅನುಸರಿಸಬೇಕು.

ಇದೊಂದು ರಾಜಕೀಯ ಹೋರಾಟವಾಗದೆ ಜನತೆಯಿಂದಲೇ ಜನತೆ ಗೋಸ್ಕರವಾಗಿಯೇ ನಡೆಯುವ, ಸರ್ವರಿಗೆ ಸಮಬಾಳು ಮತ್ತು ಸರ್ವರಿಗೆ ಸಮಪಾಲು ಎಂಬ ಗುರಿಯೊಂದಿಗೆ ನಡೆವ ಚಳುವಳಿಯಾಗಬೇಕು.

ಬಂಟ್‌ಲ್ಯಾಂಡ್ ವರದಿ ವ್ಯಾಖ್ಯಾನಿಸುವಂತೆ ಸುಸ್ಥಿರ ಅಭಿವೃದ್ಧಿ ಅಂದರೆ ಮುಂದಿನ ಜನಾಂಗ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಇಂದಿನ ಜನಾಂಗದವರು ತಮ್ಮ ಅಗತ್ಯತೆ ಪೂರೈಸಿಕೊಳ್ಳಲು ಜನರನ್ನು ಸಮರ್ಥರನ್ನಾಗಿ ಮಾಡುವುದೆ ಆಗಿದೆ. ಈ ಚಳುವಳಿಯ ಉದ್ದೇಶವೂ ಇದಾಗಬೇಕು.

ಸುಂದರಲಾಲ್ ಬಹುಗುಣರವರ ಚಿಪ್ಕೋ ಆಂದೋಲನದ ಕಾಲದಿಂದ ಪಶ್ಚಿಮಘಟ್ಟ ಉಳಿಸಿ ಹೋರಾಟ ಕಾಲದವರೆಗಿನ ಮತ್ತು ಯಂತ್ರಗಳನ್ನು ಕಟ್ಟೋಣ ಎಂಬ ವಿಚಾರದ ಕಾಲದಿಂದ ಯಂತ್ರಗಳನ್ನು ಕಳಚೋಣ ಬನ್ನಿ ಎಂಬ ವಿಚಾರದ ಕಾಲಘಟ್ಟದೊಳಗಿನ ರಾಷ್ಟ್ರೀಯ ಮಟ್ಟದ ಪರಿಸರ ಉಳಿಸಿ ಆಂದೋಲನಗಳಲ್ಲಿ ತೊಡಗಿರುವ ಎಲ್ಲ ಕಾರ್ಯಕರ್ತರು ಮತ್ತು ಗ್ರಾಮಭಾರತದ ಏಳಿಗೆ ಬಯಸುವವರೆಲ್ಲ ಲೋಕನೀತಿಯ ಈ ಚಳುವಳಿಯಲ್ಲಿ ಭಾಗವಹಿಸಿ ಬದನವಾಳು ರಾಷ್ಟ್ರೀಯ ಸಮಾವೇಶದ ಆಶಯಗಳು ಪೂರ್ಣಗೊಳ್ಳುವಂತೆ ಸಂಕಲ್ಪಬದ್ಧರಾಗೋಣ. ಜೈ ಜಗತ್ ✷

# ಕನ್ನಡವೊಂದು ಸುಂದರ ಬದುಕಾಗಲಿ

– ನಾ.ಸು.ನಾಗೇಶ್

**(ಕಳೆದ ವರ್ಷ ಮಾರ್ಚ್ ೧೪ರಂದು ನಾಗಮಂಗಲ ತಾಲ್ಲೂಕು ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷೀಯ ಭಾಷಣ – ಸಂ)**

ಇದು ಜಾತ್ರಾ ಸ್ವರೂಪ ಕಂಡುಕೊಂಡರೂ ಇದು ಜಾತ್ರೆಯಲ್ಲ. ಇಲ್ಲಿ ಭಾಗವಹಿಸುವ ಪ್ರತಿಯೊಬ್ಬರಲ್ಲೂ ನನ್ನದು ಹಾಗೂ ನಾನಿದರ ಭಾಗಿ ಎನ್ನುವ ದರ್ಪಣ ಸ್ವರೂಪದ ಅಭಿವ್ಯಕ್ತಿಯನ್ನು ಕಾಣುತ್ತೇವೆ. ನಾಡಿನಾದ್ಯಂತ ಕನ್ನಡಿಗರನ್ನು ಸೆಳೆವ ಮಹಾ ಸಮ್ಮೇಳನಗಳಷ್ಟೆ ಮಹತ್ವ ಅತ್ಯಂತ ಕಿರುಪ್ರಾಂತೀಯ ಪ್ರಾತಿನಿಧಿಕವಾದ ತಾಲ್ಲೂಕು ಸಮ್ಮೇಳನಗಳು ಸಹ ಅದರ ಅಣಕು ಸಮ್ಮೇಳನಗಳಾಗದೇ ಅದೇ ಪ್ರಾಶಸ್ತ್ಯವನ್ನು ಪಡೆಯುತ್ತದೆ. ಅದರಿಂದಲೇ ಮಹಾಸಮ್ಮೇಳನದ ಸಾರ್ಥಕತೆಯೇ ಈ ಸಮ್ಮೇಳನದ ಸಾರ್ಥಕತೆಯ ಗಮ್ಯವೂ ಆಗಬೇಕಾಗಿರುತ್ತದೆ ಮತ್ತು ಆಗಿರುತ್ತದೆ ಕೂಡ. ತಾಲ್ಲೂಕು ವ್ಯಾಪ್ತಿಯಲ್ಲಿ ನಮ್ಮ ಚಿಂತನೆಗಳು ಹರಿದರೂ ಅದು ಒಟ್ಟಾರೆ ಕನ್ನಡದ ಎಲ್ಲ ಪ್ರದೇಶಗಳ ಚಿಂತನೆಯ ಭಾಗವೇ ಆಗಿರುತ್ತದೆ. ಸೀಮಿತ ಪ್ರದೇಶ ಸೀಮಿತ ಸಂಪನ್ಮೂಲ ಹಾಗೂ ಪರಿಮಿತ ಸಾಹಿತ್ಯಪ್ರಜ್ಞೆ ಇವೆಲ್ಲ ಮಿತಿಗಳ ನಡುವೆಯೇ ಸಂಭ್ರಮವೊಂದು ಗರಿಗೆದರಿ ಹರ್ಷ ಉಕ್ಕಿಸುವುದು ಸಹಜ. ಸಾಹಿತ್ಯ ಇಲ್ಲಿ ಪ್ರಧಾನವಲ್ಲ. ಸಾಹಿತ್ಯದ ಹೆಸರಿನ ಈ ಉತ್ಸವ ಸಾಹಿತ್ಯದ ಆಚೆನ ಎಲ್ಲ ಆಯಾಮಗಳನ್ನು ಬಳಸಿಯೇ ಎಲ್ಲರನ್ನು ಸೆಳೆಯಬೇಕಾಗುತ್ತದೆ. ಭಾಷೆ ಈ ಸಂದರ್ಭದ ಪ್ರಮುಖ ಗಮನವಾಗುತ್ತದೆ. ಭಾಷೆಯ ಸಂಪತ್ತುಗಳಿಗಿಂತ ಭಾಷೆಗೆ ಒಂದೊದಗಿರುವ ಆಪತ್ತುಗಳೇ ನಮ್ಮ ಇಂದಿನ ಕಾಳಜಿಯಾಗಿದೆ. ಇಂಗ್ಲೀಷ್ ಭಾಷೆಯ ಆಕ್ರಮಣದಿಂದಾಗಿ ಕನ್ನಡಕ್ಕೆ ಧಕ್ಕೆಯಾಗುತ್ತಿದೆ ಎಂದು ಯೋಚಿಸುವುದಕ್ಕಿಂತ ಇಂಗ್ಲೀಷ್ ಭಾಷೆಗೆ ಆ ಶಕ್ತಿ ಹೇಗೆ ಪ್ರಾಪ್ತವಾಯಿತು ಎನ್ನುವುದು ನಮ್ಮ ಆಲೋಚನೆಯಾಗಬೇಕು. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ಇಲ್ಲದ ಈ ಭಾಷೆ ಭಾರತದಲ್ಲಿ ಮಾತ್ರ ಪ್ರತಿಯೊಂದು ಭಾಷೆಯನ್ನೂ ತನ್ನ ಪ್ರಭಾವಕ್ಕೆ ಒಳಗಾಗಿಸಿಕೊಂಡ ಮಹಾಶಕ್ತಿಯ ಸ್ವರೂಪವೇನು? ಕನ್ನಡ ಈ ಮಹಾಶಕ್ತಿಯನ್ನು ಪಡೆಯುವ ವಿಧಾನವೇನು ಎನ್ನುವುದನ್ನು ನಾವೆಲ್ಲ ಅರಿಯಬೇಕು. ಇಂಗ್ಲೀಷ್ ಸರ್ಕಾರದ ಆಡಳಿತದಲ್ಲಿ ಸಮೃದ್ಧವಾಗಿದ್ದ ಕನ್ನಡ, ನಮ್ಮದೇ ಆಡಳಿತ ಕಾಲದಲ್ಲಿ ಏಕೆ ಹಿಂದೆ ಸರಿಯುತ್ತಿದೆ ಎನ್ನುವುದನ್ನು ನಮ್ಮ ಆಡಳಿತ ಶಾಹಿಗಳು ಕಾಣಬೇಕು. ಕೆಲವು ವರ್ಷಗಳ ಹಿಂದೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬಂದ ಸುತ್ತೋಲೆಯು ಬಗೆಗೆ ವಾಚಕರವಾಣಿಯಲ್ಲಿ ಓದುಗರೊಬ್ಬರು ಪ್ರಸ್ತಾಪಿಸಿದ್ದರು. ಆ ಸುತ್ತೋಲೆಯ ಪ್ರಕಾರ ಆಡಳಿತದಲ್ಲಿ ರೂಢಿಗೊಳಿಸಿಕೊಳ್ಳಬೇಕಾದ ಹೊಸ ಪ್ರಾದೇಶಿಕ ಶಬ್ದಗಳು ಹಿಂದಿ

ಭಾಷೆಯ ಶಬ್ದಗಳನ್ನು ಅನುಸರಿಸಿ ಕನ್ನಡೀಕರಣವಾಗಿ ಪಡೆಯುವಂತೆ ಆದೇಶಿಸಲಾಗಿತ್ತು. ಸರ್ಕಾರ ಅದನ್ನು ಅಕ್ಷರ ಸಹ ಪಾಲಿಸಿಕೊಂಡು ಬರುತ್ತಿದೆ. ಅದರ ಅವಾಂತರವೇ ಅಭಿಯಂತರ, ಅದೀಕ್ಷಕ, ಆರಕ್ಷಕ ಎಂಬಂತಹ ಆರ್ತನಾದಗಳು. ಹಿಂದಿ ರಾಷ್ಟ್ರಭಾಷೆಯಾಗಬೇಕು ಎನ್ನುವ ವಾದವನ್ನು ಹಿಂದಿ ಭಾಷಿಕರು ಹಾಗೂ ಸರ್ಕಾರ ಹೇಳುವುದನ್ನು ರಾಷ್ಟ್ರಪ್ರೇಮದ ಹೆಸರಿನಲ್ಲಿ ಒಪ್ಪುವುದು ಎಷ್ಟು ಸರಿ. ರಾಜ್ಯಾಂಗ ರಾಷ್ಟ್ರಭಾಷೆಯೆಂದು ಅಂಗೀಕರಿಸಿರುವ ಭಾಷೆಗಳಲ್ಲಿ ಹಿಂದಿ ಮತ್ತು ಕನ್ನಡ ಸಮಸ್ಥಾನಗಳಲ್ಲಿವೆ. ಅಲ್ಲದೇ ರಾಷ್ಟ್ರಕ್ಕೆ ಒಂದೇ ಆಡಳಿತ ಭಾಷೆ ಬೇಕೆನ್ನುವುದು ಮೂರ್ಖ ವಾದವೂ ಹೌದು. ಜಗತ್ತಿನ ಅನೇಕ ರಾಷ್ಟ್ರಗಳಲ್ಲಿ ಮೂರಕ್ಕಿಂತ ಹೆಚ್ಚು ಭಾಷೆಗಳು ಆಡಳಿತ ಭಾಷೆಯಾಗಿವೆ. ಅಲ್ಲಿನ ಸರ್ಕಾರಗಳು ಆ ಪ್ರದೇಶದ ಎಲ್ಲ ಭಾಷಿಕರಿಗೂ ಅವರವರ ಭಾಷೆಗಳಲ್ಲಿ ವ್ಯವಹರಿಸುವ ಸಾಧ್ಯತೆಗೆ ಅವಕಾಶ ಕಲ್ಪಿಸಿವೆ. ಹೀಗೆ ಆಡಳಿತದ ಹುನ್ನಾರಗಳಿಂದ ಕನ್ನಡವನ್ನು ಪಾರುಮಾಡಬೇಕಾದ ಅಗತ್ಯವನ್ನು ಕನ್ನಡಿಗರು ಕಾಣಬೇಕಿದೆ.

ವಿದ್ಯೆ ಸರ್ವ ವ್ಯಾಪಿಯಾಗುತ್ತಿರುವ ಈ ದಿನಗಳಲ್ಲಿ ಇಂಗ್ಲಿಷ್ ಶಿಕ್ಷಣದ ಮಹತ್ವದಿಂದ ಕನ್ನಡದ ಅನೇಕ ಪದಗಳು ಕಣ್ಮರೆಯಾಗುತ್ತಿವೆ. ಪರಭಾಷೆಯ ಪದಗಳು ಕನ್ನಡದೊಳಗೆ ಕನ್ನಡೀಕರಣಗೊಂಡು ಸೇರುವುದು ಭಾಷೆಯ ಬೆಳವಣಿಗೆಯ ದೃಷ್ಟಿಯಿಂದ ಸ್ವಾಗತವೇನೋ ಹೌದು, ಆದರೆ ಅದು ರೂಢಿಯಲ್ಲಿರುವ ಪದಗಳನ್ನು ಮರೆಯಾಗಿಸಿ, ಆ ಸ್ಥಾನದಲ್ಲಿ ಕನ್ನಡೀಕರಣಗೊಂಡ ಪರಭಾಷಾ ಪದಗಳೇ ಸೇರಿಕೊಳ್ಳತೊಡಗಿದರೆ ಭಾಷೆಯ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಆಮದಾಗುವ ಪದಗಳು, ರೂಢಿಯಲ್ಲಿರುವ ಪದಗಳಿಗೆ ಬದಲಿ ಪದಗಳಾಗಿ ಬರುವುದನ್ನು ಸ್ವಾಗತಿಸಬೇಕು. ಆದರೆ ಹೇಗೆ ಸಂಭವಿಸುತ್ತದೆ ಎನ್ನುವುದನ್ನು ಭಾಷಾ ವಿಜ್ಞಾನಿಗಳು ಗಮನಿಸಬೇಕಿದೆ. ಅಣೆಕಟ್ಟೆಗಳನ್ನು ಕಟ್ಟಿ ಬೇಕಾದೆಡೆಗೆ ನೀರನ್ನು ತಿರುವಿಕೊಳ್ಳುವಂತೆ ಭಾಷೆಯ ಈ ಅಭಿವೃದ್ಧಿಯ ಮೇಲೆ ಕೂಡ ಹಿಡಿತ ಸಾಧಿಸಬೇಕಿದೆ. ಅಷ್ಟಲ್ಲದೇ ದ್ರವರೂಪದಲ್ಲಿ ಒಳಗಿಳಿದು ಬೇರು ಘನವಾಗಿ ಬೆಳೆದು ಕಟ್ಟಡವನ್ನು ಶಿಥಿಲಗೊಳಿಸುವ ಪ್ರಕ್ರಿಯೆಯನ್ನು ನಾನು ಕಾಣುತ್ತಿದ್ದೇನೆ.

ಆಧುನಿಕತೆಯ ಭಾಗವಾಗಿ ಇಂದು ನಮ್ಮ ಯುವಜನತೆ ಇಂಗ್ಲೀಷ್ ಅನ್ನು ಆತುಕೊಂಡಿರುವುದು ನನ್ನ ಗಾಭರಿಯ ಸಂಗತಿಯಾಗಿದೆ. ಕನ್ನಡದಲ್ಲಿ ಮಾತನಾಡುವುದು ಅವರಿಗೆ ಕೀಳರಿಮೆಯಾಗಿರಬಹುದು. ಅಥವಾ ಕನ್ನಡದಲ್ಲಿ ಸಿಕ್ಕದ ಆನಂದಗಳು ಇಂಗ್ಲೀಷ್‌ನಲ್ಲಿ ಅವರಿಗೆ ದಕ್ಕಿರಬಹುದೇ ಎಂದು ನಾನು ಯೋಚಿಸುತ್ತಿದ್ದೇನೆ. ತಮಿಳು ಜನರ ಸ್ವಭಾವವನ್ನು ನೀವು ಗಮನಿಸಿರಬೇಕು, ಆ ಜನ ತಮಗೆ ಸಿಕ್ಕಬೇಕಾದ, ದಕ್ಕಬೇಕಾದ ಎಲ್ಲ ಆನಂದ, ದುಃಖ ಇತ್ಯಾದಿಗಳನ್ನು ತಮಿಳಿನಲ್ಲಿ ಸಿಕ್ಕರೆ ಆಸ್ವಾದಿಸುತ್ತಾರೆ, ಇಲ್ಲದಿದ್ದರೆ ನಿರ್ಲಿಪ್ತವಾಗಿ ಸುಮ್ಮನಿದ್ದುಬಿಡುತ್ತಾರೆ, ಅಥವಾ ನಿರಾಕರಿಸುತ್ತಾರೆ. ನಮ್ಮ ಹಾಗೆ ಬೇರೆ ಭಾಷೆಯಲ್ಲಿ ಆನಂದವಿದೆಯೆಂದು ನಮಗೆ ಅನಿಸಿದರೆ ಕಷ್ಟಪಡುತ್ತಾ ಆ

ಭಾಷೆಯನ್ನು ಅರಿವಾಗಿಸಿಕೊಳ್ಳಲು ಒದ್ದಾಡುತ್ತಾ ಆ ಆನಂದವನ್ನು ಪಡೆಯುವ ಯತ್ನ ಮಾಡುತ್ತೇವೆ. ಡಬ್ಬಿಂಗ್ ವಿರೋಧಿ ಚಳುವಳಿಯನ್ನು ಗಮನಿಸಿ, ಕನ್ನಡದ ಸೃಜನಶೀಲತೆಗೆ ಧಕ್ಕೆಯಾಗುವ ಡಬ್ಬಿಂಗ್ ಕಲೆಯನ್ನು ವಿರೋಧಿಸುವುದು ಸರಿ ಎನಿಸುತ್ತದೆ. ಆದರೆ ಉತ್ಕೃಷ್ಟವಾಗಿ ನಮ್ಮ ಭಾಷೆಯ ಗ್ರಹಿಕೆಯಲ್ಲಿ ಪಡೆಯಲಾಗುವುದಿಲ್ಲ ಎನ್ನುವುದನ್ನು ಮನಗಂಡಾಗ ಡಬ್ ಆಗಿಯಾದರೂ ಸರಿ ನಮಗೆ ಅದು ನಮ್ಮ ಭಾಷೆಯಲ್ಲಿ ದಕ್ಕಬೇಕು ಎಂದು ನಾವು ಭಾವಿಸುವುದಿಲ್ಲ. ಆದರೆ ತಮಿಳರು ತಮಗೆ ಅರ್ಥವಾಗದ ಭಾಷೆ ಎಂದಾಕ್ಷಣ ತೋರುವ ಅಸಡ್ಡೆಯಿಂದಲೇ ಜಾಗೃತವಾದ ಕಲಾ ಮಾಧ್ಯಮದ ಮಾರಾಟಗಾರರು ತಮ್ಮ ಸರಕನ್ನು ಮಾರಲೇಬೇಕಾದುದರಿಂದ ಡಬ್ ಮಾಡಿಯೇ ಅವರ ಮುಂದಿಡುತ್ತಾರೆ. ಹೀಗೆ ತಮಿಳರು ನನ್ನ ದೃಷ್ಟಿಯಲ್ಲಿ ಒಂದು ದೊಡ್ಡ ಪ್ರಮಾಣದ ಗ್ರಾಹಕ ಜಾಗೃತಿಯನ್ನು ತಮ್ಮ ಸ್ವಭಾವವಾಗಿ ರೂಢಿಸಿಕೊಂಡಿದ್ದಾರೆ ಎನಿಸುತ್ತದೆ. ಅದರಿಂದಾಗಿ ನ್ಯಾಷನಲ್ ಜಿಯಾಗ್ರಫಿಯಂತಹ ಟಿ.ವಿ. ದೃಶ್ಯ ಮಾಧ್ಯಮದ ಛಾನೆಲ್ಲುಗಳ ಪೂರ್ಣ ಆನಂದವನ್ನು ಗ್ರಹಿಸುವುದಕ್ಕೆ ಅವರಿಗೆ ಸಾಧ್ಯವಾಗಿರುತ್ತದೆ. ಹಾಲಿವುಡ್‌ನಲ್ಲಿನ ಅನೇಕ ಚಿತ್ರಗಳೂ ಕೂಡ ಅವರಿಗೆ ಅವರದೇ ಭಾಷೆಯಲ್ಲಿ ಆನಂದವಾಗಿ ಪಡೆಯುವುದಕ್ಕೆ ಸಹಕಾರಿಯಾಗಿದೆ. ಕನ್ನಡ ಕೂಡ ಇಂತಹ ಬೃಹತ್ ಗ್ರಾಹಕ ಸಮುದಾಯವಾಗಬೇಕು. ಆಗ ನಮ್ಮ ಆನಂದವನ್ನು ಪಡೆಯುವುದಕ್ಕಾಗಿ ಅನ್ಯ ಭಾಷೆಯನ್ನು ಅವಲಂಬಿಸುವುದು ತಪ್ಪುತ್ತದೆ ಮತ್ತು ಅನ್ಯ ಭಾಷೆಯ ಆಕ್ರಮಣದಿಂದ ನಮ್ಮನ್ನು ನಾವು ಪಾರುಮಾಡಿಕೊಳ್ಳಬಹುದಾಗಿರುತ್ತದೆ.

ಕನ್ನಡಿಗರು ವಿಶಾಲ ಮನೋಭಾವದವರು ಎಂದು ಪ್ರಸಿದ್ಧರಾಗಿದ್ದಾರೆ. ಕನ್ನಡಿಗರ ಮನೋವೈಶಾಲ್ಯವನ್ನು ದೌರ್ಬಲ್ಯವೆಂದು ನಮ್ಮ ಚಳುವಳಿಗಾರರು ನಮ್ಮನ್ನು ಹೀಯ್ಯಾಳಿಸಿ, ಕೋಪಗೊಳ್ಳುತ್ತಾರೆ. ನಮ್ಮ ಹೃದಯವೈಶಾಲ್ಯದ ಪರಿಣಾಮವಾಗಿ ಇಲ್ಲಿ ಕನ್ನಡ ನಾಡು ಹೊರಭಾಷಿಕರಿಂದ ತುಂಬಿಹೋಗಿದೆ. ಭಾರತದ ಪ್ರತಿಯೊಬ್ಬರೂ ಬೆಂಗಳೂರಿನಲ್ಲಿ ನಿವೇಶನ ಹೊಂದುವ ನೆಮ್ಮದಿಯ ನಾಡನ್ನಾಗಿ ಕರ್ನಾಟಕವನ್ನು ಕಾಣುತ್ತಿದ್ದಾರೆ. ಅಂತಹ ನೆಮ್ಮದಿಯನ್ನುಣಿಸುವ ಈ ನೆಲದ ಗುಣವನ್ನು ಕಂಡ ಕವಿ 'ಸರ್ವಜನಾಂಗದ ಶಾಂತಿಯ ತೋಟ' ಎಂದು ಹಾಡಿ ಹೊಗಳಿದ್ದಾರೆ. ಕನ್ನಡಿಗರ ಈ ಮನೋವೈಶಾಲ್ಯ. ಪರಸಹಿಷ್ಣತೆ ದೌರ್ಬಲ್ಯವಾಗದಂತೆ ಆತ್ಮಾಭಿಮಾನವನ್ನು ರೂಢಿಸಿಕೊಳ್ಳಬೇಕಿದೆ. ಆತ್ಮಾಭಿಮಾನಕ್ಕೆ ನಮ್ಮ ನಡವಳಿಕೆ ಸುಧಾರಣೆಯಾಗಬೇಕಾಗುತ್ತದೆ. ನಮ್ಮನ್ನು ನಾವು ನೋಡಿಕೊಳ್ಳುತ್ತಾ ಕೀಳರಿಮೆಯಿಲ್ಲದ ಸಾಧನೆಯ ಜೀವ ನಾವು ಎನ್ನುವ ಹೆಮ್ಮೆ ನಮ್ಮದಾಗಬೇಕಾಗುತ್ತದೆ. ಹರಿದುಬಂದ ಎಲ್ಲ ನದಿಗಳನ್ನೂ ಒಳಗೆ ತುಂಬಿಕೊಂಡು, ಸಮುದ್ರವು ಗಂಭೀರ ಅಲೆಗಳಿಂದ ರಾರಾಜಿಸುವಂತೆ ಕನ್ನಡ ನಾಡು, ಕನ್ನಡಿಗರು ವಿಜೃಂಭಿಸಬೇಕು.

ನಮ್ಮ ತಾಲ್ಲೂಕಿನ ಜನಜೀವನದ ಚಿತ್ರವನ್ನು ಸಹ ನಾನಿಲ್ಲಿ ಪ್ರಸ್ತಾಪಿಸಬೇಕಿದೆ. ಬೆಂಗಳೂರು ನಮಗೆ ಎರಡು-ಮೂರು ಗಂಟೆಗಳ ಪ್ರಯಾಣದ ಅಂತರದಲ್ಲಿದೆ.

ಬೆಂಗಳೂರಿನ ವೈಭವದ ಬದುಕು ಅಲ್ಲಿನ ಸೌಲಭ್ಯಗಳು, ಸೌಕರ್ಯಗಳು, ರಂಜನೆಗಳು, ರುಚಿಗಳು ಕಣ್ಣಳತೆಯ ದೂರದಲ್ಲಿದ್ದು, ನನ್ನ ತಾಲ್ಲೂಕಿನ ಯುವಜನತೆಗೆ ಕಾಣುತ್ತಿದೆ. ಇಲ್ಲಿ ಮೈ ಮುರಿದು ದುಡಿದು ಬಿಸಿಲು ಮಳೆಗೆ ಒಡ್ಡಿಕೊಂಡು ವ್ಯವಸಾಯ ಮತ್ತಿತರ ಕುಲಕಸುಬುಗಳಲ್ಲಿ ಗಳಿಸುವುದು ಹೊಟ್ಟೆಗೆ ನಿಲುಕಿದರೆ ಹೆಚ್ಚು. ಬೆಂಗಳೂರಿನ ಹೋಟೆಲ್‌ನಲ್ಲೋ, ಬಾರ್‌ನಲ್ಲೋ ಕೆಲಸ ಮಾಡಿದರೆ ಇಲ್ಲಿಯ ಗಳಿಕೆಯ ನಾಲ್ಕರಷ್ಟು ಗಳಿಸಬಹುದು. ಬೆಂಗಳೂರಿನ ಎಲ್ಲಾ ರಂಜನೆಗಳನ್ನು ಅನುಭವಿಸಬಹುದು. ಮಿಕ್ಕ ಕೂಡಿಟ್ಟ ಹಣದಲ್ಲಿ ಒಂದು ಪುಟ್ಟ ನಿವೇಶನ ಖರೀದಿಸಿದರೆ ಮೂರು ನಾಲ್ಕು ವರ್ಷಗಳಲ್ಲಿ ಅಪ್ಪನ ಆಸ್ತಿಯಲ್ಲಿ ಬರುವ ಜಮೀನೆಲ್ಲವನ್ನು ಮಾರಿದರೂ ಈ ನಿವೇಶನದ ಬೆಲೆಯ ಹತ್ತನೇ ಒಂದು ಭಾಗದ ಬೆಲೆ ಬರುವುದಿಲ್ಲ. ಮಕ್ಕಳ ವಿದ್ಯಾಭ್ಯಾಸಕ್ಕೆ ದೊಡ್ಡ ದೊಡ್ಡ ಶಾಲೆಗಳಿವೆ. ಐ.ಎ.ಎಸ್.ಪಾಸು ಮಾಡಿಸುವ ಶಕ್ತಿಯನ್ನು ಮಕ್ಕಳಿಗೆ ತುಂಬಿಸಲು ತರಗತಿಗಳಿವೆ. ಹಳ್ಳಿಯ ಬದುಕು ಅಸಹನೀಯವಲ್ಲದೇ ಮತ್ತೇನು? ಇಲ್ಲೇಕಿರಬೇಕು ಎನ್ನುವ ಸಹಜ ಭಾವನೆ ನನ್ನ ಯುವ ಮಿತ್ರರಲ್ಲಿ ಇದ್ದರೂ ತಪ್ಪಿಲ್ಲ. ನಗರ ವಾಸಿಗಳಿಗೆ ಲಭ್ಯವಾಗುವ ರಂಜಿತ ಬದುಕು ಇವರಿಗೂ ಲಭ್ಯವಾಗಲಿ ಮತ್ತು ಲಭ್ಯವಾಗಬೇಕು ಸಹ. ಇದರ ಪರಿಣಾಮವಾಗಿ ಹಳ್ಳಿ ತೊರೆಯುವ ಯುವಶಕ್ತಿಯ ಸಂಖ್ಯೆ ಹೆಚ್ಚಾಗಿದೆ. ಹಳ್ಳಿಯ ಬದುಕು ನಾಶವಾಗುತ್ತಿದೆ. ರೈತಪರವಾದ ಕಾಳಜಿ ಇಂದಿನ ರಾಜಕೀಯದ ಉಸಿರು. ರೈತರ ಅಭ್ಯುದಯದ ಬಗ್ಗೆ ಮಾತನಾಡದಿದ್ದರೆ ಸರ್ಕಾರದ ಕೆಲಸ ನಡೆಯುವುದಿಲ್ಲ. ಅದರಿಂದಾಗಿ ರೈತ ಜನಗಳ ಬದುಕು ಹಸನಾಗಬೇಕೆಂದು ವಿವಿಧ ರೈತಭಾಗ್ಯಗಳನ್ನು ಜನರಿಗೆ ಸರ್ಕಾರ ನೀಡುತ್ತಿದೆ. ಈ ಭಾಗ್ಯಗಳ ಗಳಿಕೆಗಾಗಿ ಅರ್ಜಿ ಹಿಡಿದು ಇಲಾಖೆಗಳಿಗೆ ಅಲೆದು ಗಿಟ್ಟಿಸಿಕೊಳ್ಳುವುದಕ್ಕೆ ಅವನ ಬದುಕು ಮೀಸಲಾಗುತ್ತದೆ. ಗೆಳೆಯ ನಾಗತಿಹಳ್ಳಿ ಚಂದ್ರಶೇಖರ್ ಹೇಳುವಂತೆ ಹಳ್ಳಿಗಳು ಅನಾಥವಾಗುತ್ತಿವೆ. ಇದು ಇಡೀ ದೇಶದ ಚಿತ್ರವೂ ಇರಬಹುದು. ನಗರಗಳು ಆಧುನಿಕತೆಯ ಬೆಡಗಿನಿಂದ ಬೆಳೆದು ನಿಂತು, ಗ್ರಾಮೀಣ ಬದುಕನ್ನು ಕಂಡು ಅಪಹಾಸ್ಯಗೈಯುವ ಈ ಪರಿ ನನಗೆ ತೀರ ಅನಾಗರಿಕವಾಗಿ ತೋರುತ್ತಿದೆ. ಗ್ರಾಮ ಮತ್ತು ನಗರಗಳ ನಡುವಣ ಬದುಕಿನ ಅಂತರ ಅಸಹ್ಯವಾಗಿಯೂ, ಕ್ರೂರವಾಗಿಯೂ ರೂಪುಗೊಳ್ಳುತ್ತಿದೆ.

ಗಾಂಧಿಯವರ ಕನಸಿನ ಗ್ರಾಮದ ಕಲ್ಪನೆಯನ್ನು ಇಲ್ಲಿ ನೆನಪಿಸುತ್ತಿದ್ದೇನೆ. "ನನ್ನ ಆದರ್ಶ ಗ್ರಾಮ ಬುದ್ಧಿವಂತ ಜನರಿಂದ ತುಂಬಿರುತ್ತದೆ. ಅವರು ಪ್ರಾಣಿಗಳಂತೆ ಕೊಳಚೆ ಮತ್ತು ಅಜ್ಞಾನದಲ್ಲಿ ಬದುಕುವುದಿಲ್ಲ. ಅಲ್ಲಿ ಸ್ತ್ರೀ-ಪುರುಷರು ಮುಕ್ತವಾಗಿ ಬದುಕುತ್ತಾರೆ. ಜಗತ್ತಿನ ಯಾವ ನಿಲುವಿನ ವಿರುದ್ಧವೂ ದನಿ ಎತ್ತುವ ಸಾಮರ್ಥ್ಯವು ಅವರಿಗಿರುತ್ತದೆ. ಅಲ್ಲಿ ಪ್ಲೇಗ್, ಕಾಲರಾ ಅಥವಾ ಸಿಡುಬಿನ ಆತಂಕವಿರುವುದಿಲ್ಲ. ಯಾರೊಬ್ಬರೂ ಸೋಮಾರಿಯಾಗಿರುವುದಿಲ್ಲ. ಅಲ್ಲಿ ಪ್ರತಿಯೊಬ್ಬರೂ ತಮ್ಮ ಪಾಲಿನ ದುಡಿಮೆಯನ್ನು ಸಲ್ಲಿಸಲೇಬೇಕು."

ಇಂತಹ ಆದರ್ಶ ಗ್ರಾಮದ ಸಾಧ್ಯತೆ ಏಕೆ ಸಾಧ್ಯವಾಗಲಿಲ್ಲ ಎಂದು

ಆಶ್ಚರ್ಯವಾಗುತ್ತದೆ. ಇದೊಂದು ಅಸಾಧ್ಯವಾದ ಕಲ್ಪನೆಯಲ್ಲ. ಗಾಂಧಿಯವರನ್ನು ರಾಷ್ಟ್ರಪಿತ ಎಂದು ಪೂಜಿಸುವ ಈ ನಾಡು, ನಾವು ದೇವರುಗಳನ್ನು ಇಡುವಷ್ಟು ಅಂತರದಲ್ಲಿ ಇಟ್ಟು ಗಾಂಧಿಯನ್ನು ಗಾಂಧಿಯವರ ವಿಚಾರಧಾರೆಗಳನ್ನು ಬಿಟ್ಟುಬಿಟ್ಟಿದ್ದೇವೆ. ಮೇಲಿನ ಅವರ ಕಲ್ಪನೆಯನ್ನು ಸಾಕಾರಗೊಳಿಸಲು ಅಸಾಧ್ಯವೆನಿಸುವ ಸಂಗತಿಗಳು ಕೇವಲ ನಮ್ಮ ಉದಾಸೀನ ಪ್ರವೃತ್ತಿ ಎಂದು ನನಗೆ ತೋರುತ್ತದೆ. ಹಿಂದೆ ಗ್ರಾಮಗಳಲ್ಲಿನ ಪ್ರತಿಯೊಂದು ಕೆಲಸಗಳೂ ಊರೊಟ್ಟಿನ ಶ್ರಮದಿಂದ ನಡೆಯುತ್ತಿತ್ತು. ಪರಾವಲಂಬನೆ, ಪರಸ್ಪರ ಸಹಕಾರದಿಂದ ಊರು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಿತ್ತು. ಪೂಜ್ಯ ಬೆಳಗೆರೆ ಕೃಷ್ಣಶಾಸ್ತ್ರಿಗಳು ತಾವು ಕೆಲಸ ಮಾಡಿದ ಊರುಗಳಲೆಲ್ಲಾ ಸರ್ಕಾರದ ಹಣವಿಲ್ಲದೇ ಸಾರ್ವಜನಿಕರ ಬೆಂಬಲ ಕೂಡಿಸಿ ಶಾಲೆಗಳನ್ನು ಕಟ್ಟಿದ್ದಾರೆ. ಸಾರ್ವಜನಿಕ ಹಿತಕ್ಕೆ ತಮ್ಮನ್ನು ತಾವೇ ತೊಡಗಿಸಿಕೊಳ್ಳುವ ಇಂತಹ ಪ್ರವೃತ್ತಿ ಹಾಗೂ ಶ್ರಮದಾನ ಮಡಿ ಗ್ರಾಮಗಳ ಉದ್ಧಾರ ಮಾಡಿಸುತ್ತಿದ್ದ ಸಂಕಲ್ಪ ಶಕ್ತಿಗಳು ಯಾಕೆ ಇಂದು ಕಣ್ಮರೆಯಾಗಿವೆ? ನಮ್ಮ ಎಲ್ಲ ಬೇಕುಗಳಿಗಾಗಿ ನಾವು ಸರ್ಕಾರಕ್ಕೆ ಒತ್ತಡ ಹಾಕಿ ಸರ್ಕಾರದ ಸಹಾಯವನ್ನು ಯಾಚಿಸುತ್ತಾ ಕುಳಿತುಕೊಳ್ಳುತ್ತಿದ್ದೇವೆ. ಇಂತಹ ಅವಲಂಬನೆಯಿಂದ ಹಾಗೂ ದುರಾಸೆಯಿಂದ ನಮ್ಮ ಕ್ರಿಯಾಶೀಲತೆ ನಾಶವಾಗುತ್ತಿದೆ. ನಾವು ಕ್ರಿಯಾಶೀಲವಾಗಿದ್ದರೆ ಮೇಲಿನ ಆದರ್ಶ ಗ್ರಾಮದ ಕಲ್ಪನೆ ಸಾಕಾರಗೊಳ್ಳಲು ಕಷ್ಟವಾಗುತ್ತಿರಲಿಲ್ಲ. ಅದು ತನ್ನಂತೆ ತಾನೇ ಸಾಧ್ಯವಾಗುತ್ತದೆ. ಸರ್ಕಾರವೆನ್ನುವ ಆಡಳಿತ ಯಂತ್ರವನ್ನು ಎಷ್ಟು ಬೇಕೋ ಅಷ್ಟು ಮಾತ್ರ ಬಳಸಿಕೊಳ್ಳುವ ಮನೋಭಾವವನ್ನು ಸಹ ನಾವು ರೂಢಿಸಿಕೊಳ್ಳುವುದು ಅಗತ್ಯವಾದುದು ಎಂದು ಭಾವಿಸುತ್ತೇನೆ.

ಸ್ವಾತಂತ್ರ್ಯಗಳಿಸಿದ ದಿನದಿಂದ ಈವರೆಗಿನ ಅವಧಿಯಲ್ಲಿ ಅವಲೋಕಿಸಿದರೆ ದೇಶ ತುಂಬ ಹೆಚ್ಚಿನ ಪ್ರಗತಿಯನ್ನು ಕಂಡಿದೆ. ವಿದ್ಯಾವಂತರ ಸಂಖ್ಯೆಯಲ್ಲಿ ತೀವ್ರವಾದ ಹೆಚ್ಚಳವಾಗಿದೆ. ಅನಕ್ಷರಸ್ತರ ಸಂಖ್ಯೆ ಕೇವಲ ಬೆರಳೆಣಿಕೆಯ ಸಾವಿರದಲ್ಲಿದ್ದಿರಬಹುದು. ಈ ಪ್ರಗತಿಯನ್ನು ಅಸಾಧಾರಣವೆಂದೇ ಭಾವಿಸಬೇಕು. ಆದರೆ ಈ ಅಳತೆಗೋಲಿನ ಮಾಪನವನ್ನು ನಾವು ಅಕ್ಷರವೆಂದು ಭಾವಿಸಿದ್ದೇವೆ. ಅಕ್ಷರವೇ ವಿದ್ಯೆಯೆಂದು ನಾವು ನಂಬಿದ್ದೇವೆ. ನಮ್ಮ ಈ ನಂಬಿಕೆ ಪರಾಮರ್ಷೆಯ ಅಗತ್ಯವನ್ನು ನಾನಿಂದು ಕಾಣುತ್ತಿದ್ದೇನೆ. ಸಾಕ್ಷರತೆಯೇ ಗುರಿಯಾಗಿ ನಾವು ಎಲ್ಲರನ್ನು ವಿದ್ಯಾವಂತರೆಂದು ಘೋಷಿಸುತ್ತಿದ್ದೇವೆ. ಶ್ರಮ, ಅನುಭವ ಮತ್ತು ಪರಂಪರೆಯಿಂದ ಬಂದ ಜ್ಞಾನ ಮತ್ತು ಕೈಚಳಕಗಳು ಸಹ ವಿದ್ಯೆ ಎಂದು ನಮ್ಮ ಅರಿವಿಗೆ ಬರುತ್ತಿಲ್ಲ. ಈ ಜ್ಞಾನಗಳು ನಮಗೆ ಹರಿಯುವಾಗ ನಮ್ಮ ಸಾಮಾಜಿಕ ಬದುಕಿಗೆ ಬೇಕಾದ ತಿಳುವಳಿಕೆ ಲಭ್ಯವಾಗುತ್ತಿತ್ತು. ಅಕ್ಷರ ಕಲಿಕೆ ಹೊಟ್ಟೆ ಪಾಡಿಗೆ ಹಣ ಗಳಿಸಿಕೊಡುವ ತಂತ್ರಗಳನ್ನು ಕಲಿಸುತ್ತದೆ. ಆದರೆ ನಮಗೆ ಸಮಾಜದಲ್ಲಿ ಇನ್ನೊಬ್ಬರಿಗೆ ತೊಡಕಾಗದಂತೆ ಹೇಗೆ ನಮ್ಮ ಬದುಕನ್ನು ರೂಢಿಸಿಕೊಳ್ಳಬಹುದು ಎನ್ನುವುದನ್ನು ಕಲಿಸಿಕೊಡಲಿಲ್ಲ. ನಮ್ಮನ್ನು ಸಂಭಾವಿತರನ್ನಾಗಿ ಮಾಡುವ ಶಿಕ್ಷಣ ಬೇಕು. ಓದು ಕಲಿಸುತ್ತಿರುವ ಶಾಲೆಗಳು ಹಣ ಮಾಡುವ

ಅಂಗಡಿಗಳಾಗುತ್ತಿವೆ. ಅವುಗಳಿಂದ ಇದು ಸಾಧ್ಯವಾಗುವುದಿಲ್ಲ. ನಮ್ಮ ವಿಶ್ವ ವಿದ್ಯಾನಿಲಯಗಳಿಂದಲೂ ಇದು ಸಾಧ್ಯವಾಗುವುದಿಲ್ಲ. ಲಕ್ಷಾಂತರ ಜನ ಸಾಫ್ಟ್‌ವೇರ್ ಇಂಜಿನಿಯರುಗಳನ್ನು, ಶ್ರೀಮಂತರನ್ನು ಆಕರ್ಷಿಸುತ್ತಿರುವ ಬೌದ್ಧಿಕ ಗುರುಗಳು ತಮ್ಮ ಪ್ರಾಣಾಯಾಮದ ಕ್ಯಾಂಪ್‌ಗಳಲ್ಲಿ ಉಸಿರಾಡುವ ಕ್ರಿಯೆಯನ್ನು ಹೇಳಿಕೊಡುತ್ತಾ ಅದರಿಂದ ಹೇಗೆ ಕೆಲಸದ ಒತ್ತಡಗಳನ್ನು, ಕಾಯಿಲೆಗಳನ್ನು ನಿಭಾಯಿಸಿಕೊಳ್ಳಬಹುದು ಎಂದು ಹೇಳಿಕೊಡುತ್ತಾರೆ. ಆದರೆ ಸಂಭಾವಿತನಾಗಿ ಬದುಕುವುದು ಹೇಗೆ ಎಂದು ಹೇಳಿಕೊಡುವುದಿಲ್ಲ. ಸಾಮಾಜಿಕ ಜೀವನ ಸುಧಾರಣೆಯನ್ನು ತಿಳಿಸುವುದಿಲ್ಲ. ಅವರ ಪ್ರಭಾವಗಳು ಅದೆಷ್ಟೊಂದು ಜೀವನಗಳನ್ನು ಸುಧಾರಣೆಯ ದಾರಿಗೆ ತರಬಹುದು! ಶಾಲಾ ಶಿಕ್ಷಣಕ್ಕಿಂತ ಸಾರ್ವಜನಿಕ ಬದುಕಿನ ಶಿಕ್ಷಣದ ಅಗತ್ಯ ಅಷ್ಟೊಂದು ತೀವ್ರವಾಗಿದೆ. ನಮ್ಮ ಪ್ರತಿಯೊಂದು ಮಠಗಳಿಗೂ ಅಪಾರವಾದ ಭಕ್ತವೃಂದವಿದೆ. ಮಠಗಳು ಈ ಜೀವನ ಸುಧಾರಣೆಯನ್ನು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ತಮ್ಮ ಭಕ್ತರನ್ನು ಪ್ರಭಾವಿಸದಿದ್ದರೆ ಮತ್ತಾರು ಮಾಡುವವರೆಂದು ನಿರೀಕ್ಷಿಸಬೇಕು? ಅಂಥ ಬದುಕಿನ ಸಂಸ್ಕಾರ ವಂಚಿತರಾದ ನಾವು ಬದುಕುವ ಕ್ರಮ ಗೊತ್ತಿಲ್ಲದೇ ಪರಸ್ಪರ ಅಪನಂಬಿಕೆ ಹಾಗೂ ಮೋಸಗಳಿಂದ ಒಬ್ಬರನ್ನೊಬ್ಬರು ಕೊಚ್ಚಿ ಹಾಕುವ ಸನ್ನಾಹವನ್ನು ಮನದಲ್ಲೇ ರೂಪಿಸುತ್ತಾ ಅವಕಾಶಕ್ಕಾಗಿ ಕಾಯುತ್ತಿರುವ ರೀತಿಯಲ್ಲಿ ಬದುಕುತ್ತಿದ್ದೇವೆ. ನಾವು ಯಾರೂ ಪರಸ್ಪರ ರಕ್ಷಣೆಯಿಂದ ಬದುಕಲಾರದ ಸ್ಥಿತಿಯನ್ನು ತಲುಪುತ್ತಿದ್ದೇವೆ ಎನ್ನುವುದನ್ನು ನಾವೆಲ್ಲರೂ ಆತಂಕದಿಂದ ಮನಗಾಣಬೇಕಿದೆ. ಕೊನೆಯದಾಗಿ ನಮ್ಮ ಬದುಕು ಎಷ್ಟು ದಾರುಣವಾಗಿದೆ ಎನ್ನುವುದನ್ನು ಗಮನಿಸಿ.

ನಾವಿಂದು ಪುಂಡ ಸಮುದಾಯದ ಭಾಗವಾಗಿದ್ದೇವೆ. ನಮ್ಮ ನಾಚಿಕೆಯನ್ನು ದೌರ್ಬಲ್ಯವೆಂದು ಹೀಗಳೆಯುವ ಭಂಡ ಸಂಸ್ಕೃತಿಗೆ ನಾವು ಶರಣಾಗಿದ್ದೇವೆ. ಮನುಷ್ಯನ ಅತ್ಯಂತ ಮಾನವೀಯ ಭಾವವೇ ನಾಚಿಕೆ. ಅವನನ್ನು ಸಂಸ್ಕಾರಗೊಳಿಸುವ ಏಕೈಕ ಗುಣ ನಾಚಿಕೆ. ನಾಚಿಕೆಯನ್ನು ಕಲಿಯದವ ಸೂಕ್ಷ್ಮನಾಗಲಾರ, ಸಂವೇದಿಯಾಗಲಾರ, ಸ್ವಾಭಿಮಾನಿಯಾಗಲಾರ, ಸಂಭಾವಿತನಾಗಲಾರ. ಸಂಭಾವಿತನಾಗದವ ನೆರೆಗೆ ಹೊರೆಯಾಗುತ್ತಾನೆ. ನೆತ್ತಿಯ ಮೇಲಿನ ಕತ್ತಿಯಾಗುತ್ತಾನೆ. ಸಮಾಜಕ್ಕೆ ಕಂಟಕನಾಗುತ್ತಾನೆ. ಎಲ್ಲರ ಬದುಕು ಅಸಹನೀಯಗೊಳಿಸುವ ರುದ್ರಾನಂದ ಅವನ ಅಪೇಕ್ಷೆಯಾಗುತ್ತದೆ. ಇಂತಹ ಪುಂಡ ಸ್ವಭಾವವನ್ನು ನಾವು ಹತ್ತಿಕ್ಕುವುದು ಹೇಗೆ? ಸೂಕ್ಷ್ಮತೆಯು, ಸಂಭಾವಿತ ತನವೂ, ದೌರ್ಬಲ್ಯವೇಕಾಗಬೇಕು? ನಾನು ಪ್ರಸ್ತಾಪಿಸುತ್ತಿರುವ ಈ 'ನಾಚಿಕೆ' ದೌರ್ಬಲ್ಯವಲ್ಲ, ಅಸಾಮರ್ಥ್ಯವಲ್ಲ. ಸಮಾಜ ನಾಚಿಕೆಯನ್ನು ಮೌಲ್ಯವಾಗಿ ಸ್ವೀಕರಿಸಿದಷ್ಟು ಭಂಡವಾಗಿದೆ. ನಮ್ಮ ಬದುಕು ಸಹ್ಯವಾಗಬೇಕಾದರೆ ನಾವಿಂದು ನಾಚಿಕೆಯನ್ನು ಮತ್ತೆ ಒಂದು ಸಾಮಾಜಿಕ ಮೌಲ್ಯವಾಗಿ ಸ್ಥಾಪಿಸಬೇಕಿದೆ.

ಕನ್ನಡದ ಬದುಕು, ಈ ಎಲ್ಲ ಆಶಯಗಳಿಂದ ಸುಲಲಿತವೂ, ಸುಂದರವೂ ಆದ ಜೀವನವಾಗಲಿ ಎಂದು ಆಶಿಸುತ್ತೇನೆ.

# ಜನಪದ ಸೇವಾ ಟ್ರಸ್ಟ್ ಸಮಾಚಾರ

ಶ್ರೀಕೃಷ್ಣ ಶಿಶುವಿಹಾರದ ೨೦೧೪-೧೫ನೇ ಸಾಲಿನ ಶೈಕ್ಷಣಿಕ ವರ್ಷ ಮುಗಿದಿದ್ದರಿಂದ ಮುಕ್ತಾಯ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಮಕ್ಕಳಿಂದ ಪುಟ್ಟ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ದೊಡ್ಡ ಸಂಖ್ಯೆಯಲ್ಲಿ ಮಕ್ಕಳ ತಂದೆ-ತಾಯಂದಿರು ಬಂದಿದ್ದರು. ಮಕ್ಕಳ ಕಾರ್ಯಕ್ರಮ ನೋಡಿ ಸಂತೋಷಪಟ್ಟರು. ಗ್ರಾಮದಲ್ಲಿ ೨ ಅಂಗನವಾಡಿ ಕೇಂದ್ರಗಳು ಮತ್ತು ೨ ಇಂಗ್ಲೀಷ್ ಮಾಧ್ಯಮದ ಶಿಶುವಿಹಾರಗಳಿದ್ದರೂ ಟ್ರಸ್ಟಿನ ಶ್ರೀಕೃಷ್ಣ ಕನ್ನಡ ಶಿಶುವಿಹಾರಕ್ಕೆ ಸರಾಸರಿ ४೦ ಮಕ್ಕಳ ಹಾಜರಾತಿ ಇರುತ್ತಿತ್ತು. ಶಿಶುವಿಹಾರದ ಕಾರ್ಯಕ್ರಮದಲ್ಲಿ ಕೆಲವು ತಾಯಂದಿರೂ ಸಹ ಭಾಗಿಯಾಗಿದ್ದರು. ೨೦೧೪-೧೫ ನೇ ಸಾಲಿಗೆ ಶಿಶುವಿಹಾರದ ಕಾರ್ಯಕ್ರಮಗಳನ್ನು ಇನ್ನೂ ಹೆಚ್ಚು ಚೆನ್ನಾಗಿ ಮತ್ತು ವೈವಿಧ್ಯಮಯವಾಗಿ ಮಾಡಲಾಗುವುದೆಂದು ಪೋಷಕರಿಗೆ ತಿಳಿಸಲಾಯಿತು.

******

ಹೊಸ ಜೀವನದಾರಿ ಕೇಂದ್ರದಲ್ಲಿರುವ ಪುರಾತನ ಆಂಜನೆಯ ದೇವಸ್ಥಾನದಲ್ಲಿ ಶ್ರೀರಾಮನವಮಿ ಪ್ರಯುಕ್ತ ಪೂಜಾ ಕಾರ್ಯಕ್ರಮ ನಡೆಯಿತು. ಕೇಂದ್ರದಲ್ಲಿರುವ ಎಲ್ಲರೂ ಸೇರಿದ್ದರು. ಕೊನೆಯಲ್ಲಿ ಪ್ರಸಾದ ವಿನಿಯೋಗ ನಡೆಯಿತು.

******

ಮೈಸೂರಿನಲ್ಲಿರುವ ನಿರಂತರ ಸಂಸ್ಥೆಯ ಪ್ರಸಾದ್ ದಂಪತಿಗಳು ಮತ್ತು ಅಭಿರುಚಿ ಪ್ರಕಾಶನದ ಬಸವರಾಜ್ ಭೇಟಿಕೊಟ್ಟರು.

******

೧೯೯೮ರ ಸುಮಾರಿನಲ್ಲಿ ಟ್ರಸ್ಟಿನಲ್ಲಿ ಗ್ಯಾಪ್ ಸಂಸ್ಥೆಯ ಸ್ವಯಂಸೇವಕರಾಗಿ ಕೆಲಸ ಮಾಡಿದ್ದ ಸೈಮನ್ ಮತ್ತು ಅವರ ಸ್ನೇಹಿತ ಮಾರ್ಟಿನ್ ಟ್ರಸ್ಟಿಗೆ ಭೇಟಿ ಕೊಟ್ಟರು ಮತ್ತು ತಾವು ತೊಡಗಿಸಿಕೊಂಡಿದ್ದ ಕೆಲಸ ಕಾರ್ಯಗಳನ್ನು ವೀಕ್ಷಿಸಿದರು.

******

ಕಳೆದ ಏಪ್ರಿಲ್ ೫ರಂದು ಕರ್ನಾಟಕ ಸರ್ವೋದಯ ಮಂಡಲಿಯ ಬಲ ಸಂವರ್ಧನೆಯ ಉದ್ದೇಶಕ್ಕಾಗಿ ಆಯೋಜಿಸಲಾಗಿದ್ದ ಸಭೆ ಜನಪದ ಸೇವಾ ಟ್ರಸ್ಟ್

ಆವರಣದಲ್ಲಿ ನಡೆಯಿತು. ರಾಜ್ಯದ ಬೇರೆ ಬೇರೆ ಜಿಲ್ಲಾ ಮತ್ತು ತಾಲ್ಲೂಕುಗಳಿಂದ ಸರ್ವೋದಯ ವಿಚಾರದ ಪ್ರೇಮಿಗಳು ಬಂದಿದ್ದರು. ಸುಮಾರು ೭೦ಜನ ಮಿತ್ರರು ಸೇರಿದ್ದರು. ಈ ಸಭೆಯಲ್ಲಿ ಆಕಾಶವಾಣಿಯ ಮರಳಿ ಬಾ ಮಣ್ಣಿಗೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮಿತ್ರರೂ ಬಂದಿದ್ದರು.

******

ದತ್ತು ಕೇಂದ್ರದ ಆನಂದ ಎಂಬ ಮಗುವನ್ನು ಅರ್ಹ ದಂಪತಿಗಳಿಗೆ ದತ್ತು ಕೊಡಲಾಯಿತು.

******

ಬೆಂಗಳೂರಿನಲ್ಲಿ ಇರುವ ಉದಯಭಾನು ಕಲಾ ಸಂಘದವರು ತಮ್ಮ ೫೦ನೇ ವರ್ಷದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಪ್ರಕಟಿಸುತ್ತಿರುವ ಸಾಧಕರ ಪರಿಚಯಾತ್ಮಕ ಪುಸ್ತಕಗಳ ಸರಣಿಯಲ್ಲಿ ಸುರೇಂದ್ರ ಕೌಲಗಿಯವರ ಬಗ್ಗೆಯೂ ಒಂದು ಪುಸ್ತಕವನ್ನು ಪ್ರಕಟಿಸಲಾಯಿತು. ಪುಸ್ತಕದ ಲೇಖಕರು ಕೆ.ಪಿ.ಸುರೇಶ್.

******

ಕೈ ಮಗ್ಗ ಉಳಿಸಿ ಚಳುವಳಿಯ ಅಂಗವಾಗಿ ಬದನವಾಳು ಸತ್ಯಾಗ್ರಹ ಎಂಬ ಹೆಸರಿನಲ್ಲಿ ಸುಸ್ಥಿರ ಬದುಕಿನ ಬಗ್ಗೆ ರಾಷ್ಟ್ರೀಯ ಸಮಾವೇಶ ಬದನವಾಳುವಿನಲ್ಲಿ ಏಪ್ರಿಲ್ ೧೯ರಂದು ನಡೆಯಿತು. ಪೂರ್ವಭಾವಿಯಾಗಿ ಪಾದಯಾತ್ರೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಾದಯಾತ್ರೆಯಲ್ಲಿ ಸಂತೋಷ್, ಗೀತಾ, ಸುಮನಸ್ ಮತ್ತು ಸುಪ್ರಜ್ ಭಾಗವಹಿಸಿದ್ದರು. ಮೇಲುಕೋಟೆಯ ೧೦ಜನ ವಿದ್ಯಾರ್ಥಿಗಳೂ ಭಾಗವಹಿಸಿದ್ದರು.

## ಪ್ರತಿಧ್ವನಿ

ದೇಶದಲ್ಲಿ ಬದಲಾವಣೆಯ ಸುಂಟರಗಾಳಿಯೆದ್ದಿದೆ. ಆ ಗಾಳಿಯಲ್ಲಿ ಅನೇಕ ಮೌಲ್ಯಗಳು ತರಗೆಲೆಯಂತೆ ಹಾರಿಹೋಗುವ ಸಂಭವ ಹೆಚ್ಚಿದೆ. ಬದಲಾವಣೆಗೊಳ್ಳುತ್ತಿರುವ ಯಾವುದೇ ವಿಷಯದ ಬಗ್ಗೆ ಜನಪದ ವಿಚಾರದ ಓದುಗರು ಪ್ರತಿಕ್ರಿಯಿಸಲು ಸಾಧ್ಯಮಾಡಲು ಈ ಅಂಕಣವನ್ನು ಪ್ರಾರಂಭಿಸಲಾಗಿದೆ. ಬರಹ ಹದಿನೈದರಿಂದ ಇಪ್ಪತ್ತು ಸಾಲುಗಳಲ್ಲಿ ಇರಲಿ. ಜಾಗೃತ ಓದುಗರು ಈ ಅಂಕಣದ ಪ್ರಯೋಜನ ಪಡೆಯಬೇಕಾಗಿ ವಿನಂತಿ. – ಸಂಪಾದಕ

# ಜನಪದ ನಿಲಯದ ಅಂತರಂಗದಲ್ಲಿ – ೧೩೩



ಜನಪದ ನಿಲಯದ ಅಂತರಂಗ ಅಂಕಣದ ದಶಮಾನ ಮುಗಿದಿದೆ ಮತ್ತು ಹನ್ನೆರಡನೆಯ ವರ್ಷಕ್ಕೆ ಕಾಲಿಟ್ಟಿದೆ. ಜನಪದ ಸೇವಾ ಟ್ರಸ್ಟ್ ಸ್ಥಾಪನೆಯಾಗಿ ಅರ್ಧ ಶತಮಾನಕ್ಕಿಂತಲೂ ಹೆಚ್ಚಾಯಿತು.ಜನಪದ ನಿಲಯದಲ್ಲಿ ಆದ ಬೆಳವಣಿಗೆಗಳ ಬಗ್ಗೆ ಸಿಂಹಾವಲೋಕನ ಮಾಡುವುದಕ್ಕೆ ಒಂದು ಸಂದರ್ಭ. ಈ ದೀರ್ಘಾವಧಿಯಲ್ಲಿ ಇವತ್ತಿನವರೆಗೆ ಬಹುಶಃ ಎಲ್ಲವೂ ಸಮಾಧಾನಕರ ರೀತಿಯಲ್ಲಿ ಜೀವನ ಸಾಗಿ ಬಂದಿದೆ. ಇದರ ಅರ್ಥ ಎಲ್ಲವೂ ತೃಪ್ತಿದಾಯಕ ಮತ್ತು ಅಸಂತೋಷಕ್ಕೆ ಅವಕಾಶವೇ ಇರಲಿಲ್ಲವೆಂದು ಅರ್ಥವಲ್ಲ. ಟ್ರಸ್ಟಿನ ಧ್ಯೇಯೋದ್ದೇಶಗಳ ಅನುಗುಣವಾಗಿ ಮಾಡಬೇಕಾಗಿದ್ದ ಕೆಲಸಗಳನ್ನು ಮಡಲಾಗಲಿಲ್ಲವಲ್ಲ ಎಂಬ ಅಸಂತೋಷ ಕಾಡುತ್ತಲೇ ಇದೆ. ಆಗದೇ ಇರುವುದಕ್ಕೆ ಕಾರಣಗಳು ಹಲವಾರು. ಅವು ಹೊರಗಿನವು ಎಂಬುವುದಕ್ಕಿಂತ ಆಂತರಿಕವಾದುವು. ನಮ್ಮ ಜೀವನದಲ್ಲಿಯ ಹಲವಾರು ಬಗೆಯ ಲೋಪದೋಷಗಳು ಇದಕ್ಕೆ ಕಾರಣವಾಗಿರಬಹುದು. ಅದರಂತೆಯೇ ಆಗಿರುವ ಅಲ್ಪ ಸಾಧನೆಗೆ ಕೆಲ ಸಕಾರಾತ್ಮಕ ಗುಣ ವಿಶೇಷಗಳು ಇರಬಹುದು. ಅಂತು ಒಟ್ಟಾರೆಯಾಗಿ ಟ್ರಸ್ಟಿನ ಅರ್ಧಶತಮಾನದ ಜೀವಿತಾವಧಿಯಲ್ಲಿ ಹಲವಾರು ಏಳು ಬೀಳುಗಳಾಗಿವೆ. ಟ್ರಸ್ಟಿನ ಸುವರ್ಣ ವರ್ಷದ ಈ ಸಮಯದಲ್ಲಿ ಗಮನಕ್ಕೆ ಬರುವ ಸಂಗತಿಯೇನೆಂದರೆ ಟ್ರಸ್ಟ್ ನೂರಕ್ಕೆ ನೂರು ಸಾರ್ವಜನಿಕ ಸಂಸ್ಥೆಯಾಗಿದ್ದರೂ ಬಹಳ ನೈಜವಾಗಿ ಮತ್ತು ಸ್ವಭಾವ ಜನ್ಯವಾಗಿ ಕುಟುಂಬಾಧಾರಿತ ಸಂಸ್ಥೆಯಾಗಿ ಉಳಿದುಕೊಂಡು ಬಂದಿರುವುದು. ಅದರ ಫಲವಾಗಿ ಮೂರನೆಯ ತಲೆಮಾರಿನವರೆಗೂ ಟ್ರಸ್ಟಿನ ಸಂಬಂಧ ಬೆಸೆದುಕೊಂಡು ಬಂದಿದೆ. ಮೊದಲನೆಯ ತಲೆಮಾರಿನವನಾದ ನಾನು ಟ್ರಸ್ಟ್ ಪ್ರಾರಂಭಿಸಿದೆ. ಸ್ಥಾಪಿಸುವಾಗ ಯಾವುದೇ ನಿರ್ದಿಷ್ಟ ಕಾರ್ಯಕ್ರಮಗಳ ನೀಲನಕ್ಷೆಯಾಗಲೀ, ಯಾವುದೇ ಒಂದು ಸಂಸ್ಥೆಯ ಪ್ರಾರಂಭಕ್ಕೆ ಬೇಕಾದ ಮೂಲನಿಧಿಯಾಗಲೀ, ಚರ – ಸ್ಥಿರ ಆಸ್ತಿಯಾಗಲೀ ಇರಲಿಲ್ಲ. ಕೇವಲ ಸರ್ವೋದಯ ಸಿದ್ಧಾಂತಕ್ಕೆ ಸಂಬಂಧಿಸಿದ ವಿಚಾರಗಳೇ ಮನಸ್ಸಿನಲ್ಲಿ ತುಂಬಿಕೊಂಡಿದ್ದವು. ಆ ವಿಚಾರಗಳ ಅನುಷ್ಠಾನದ ರೂಪ ಹೇಗೆ ಸಾಧ್ಯ ಮತ್ತು ಅವು ಹೇಗೆ ಇರುತ್ತವೆ ಮತ್ತು ಅದನ್ನು ಪ್ರಾರಂಭಿಸುವುದು ಹೇಗೆ ಮುಂತಾದ ಯಾವ ಸ್ಪಷ್ಟತೆಯೂ ಇರಲಿಲ್ಲ. ಕೇವಲ ಸರ್ವೋದಯ ಸಮಾಜದತ್ತ ಹೆಜ್ಜೆ ಇಡಬೇಕೆಂಬ ತೀವ್ರ ಭಾವನೆ ಮಾತ್ರ ಇತ್ತು. ಇಂಥ ಸಂದರ್ಭದಲ್ಲಿಯೇ ನನ್ನ ಮತ್ತು ಗಿರಿಜಾರವರ

ಮದುವೆಯಾಯಿತು. ಗಿರಿಜಾರವರ ತಂದೆ-ತಾಯಿಗಳೂ ಸಹ ನನ್ನ ನಿರ್ದಿಷ್ಟ ಕೆಲಸದ ಬಗ್ಗೆಯಾಗಲೀ, ಸಂಪಾದನೆಯ ಬಗ್ಗೆಯಾಗಲೀ, ಸಂಸಾರ ನಿರ್ವಹಣೆಯ ಸಾಮರ್ಥ್ಯದ ಬಗ್ಗೆಯಾಗಲೀ ಆಲೋಚನೆ ಮಾಡದೆ ವಿವಾಹ ಮಾಡಿಕೊಟ್ಟರು. ಅತ್ಯಂತ ಸರಳವಾಗಿ ಮತ್ತು ಕೇವಲ ಒಂದು ಘಂಟೆಯೊಳಗಾಗಿ ಹಿರಿಯರ ಸಮ್ಮುಖದಲ್ಲಿ ಹಾಗೂ ಸರ್ವೋದಯ ವಿಚಾರದ ಸ್ನೇಹಿತರ ಸಮಕ್ಷಮದಲ್ಲಿ ನನ್ನ ಮತ್ತು ಗಿರಿಜಾರವರ ವಿವಾಹ ನಡೆದು ಹೋಯಿತು.

ವಿವಾಹದ ನಂತರ ಒಂದು ವರ್ಷದ ಸಮಯದಲ್ಲಿ ಎರಡನೇ ತಲೆಮಾರಿಗೆ ಸೇರಿದ ಸಂತೋಷನ ಜನನ ನಂಜನಗೂಡು ತಾಲ್ಲೂಕು ಕೆಂಪಿಸಿದ್ದನಹುಂಡಿ ಎಂಬ ಗ್ರಾಮದಲ್ಲಿ ಆಯಿತು. ಸಂತೋಷ ಜನಿಸಿದಾಗ ಜನಪದ ಸೇವಾ ಟ್ರಸ್ಟ್ ಪ್ರಾರಂಭವಾಗಿ ಕೇವಲ ಒಂದು ವರ್ಷವಾಗಿತ್ತು. ಅಂದರೆ ಸಂತೋಷ್ ಒಂದು ವರ್ಷದ ಮಗು. ಟ್ರಸ್ಟ್ ಸಭೆ ನಡೆದಾಗಲೆಲ್ಲ ಮತ್ತು ಇತರ ಸಾರ್ವಜನಿಕ ಕಾರ್ಯಕ್ರಮಗಳು ನಡೆದಾಗಲೆಲ್ಲ ಅವನನ್ನು ಎತ್ತಿಕೊಂಡು ಹೋಗುವುದು ವಾಡಿಕೆಯಾಗಿತ್ತು. ಟ್ರಸ್ಟಿನ ಆಶ್ರಯದಲ್ಲಿದ್ದ ಅಂಗವಿಕಲ ಮಕ್ಕಳು ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಒಳಗಾಗಿದ್ದ ಹೆಣ್ಣು ಮಕ್ಕಳ ಮಧ್ಯದಲ್ಲಿ ಸಂತೋಷ್ ಬೆಳೆಯುತ್ತಾ ಬಂದ. ಬರುವ ಅತಿಥಿಗಳ ಸತ್ಸಹವಾಸ ಅವನಿಗೆ ದೊರೆಯುತ್ತಾ ಹೋಯಿತು. ಮೇಲುಕೋಟೆಯಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ ಹಾಗೂ ಯದುಶೈಲ ಪ್ರೌಢಶಾಲೆಗಳಲ್ಲಿ ಶಿಕ್ಷಣ ಪಡೆದ. ಗ್ರಾಮದ ಮಕ್ಕಳೊಂದಿಗೆ ಮತ್ತು ಕರುಣಾಗೃಹದ ಮಕ್ಕಳೊಂದಿಗೆ ಗಾಳಿಪಟ ಹಾರಿಸುತ್ತಾ, ಬುಗರಿ ಆಡಿಸುತ್ತಾ, ಗೋಲಿ ಆಡುತ್ತಾ, ಕ್ರಿಕೆಟ್ ಆಡುತ್ತಾ ದೊಡ್ಡವನಾದ. ಇವೆಲ್ಲ ಕಾರಣದಿಂದಾಗಿ ಸಹಜವಾಗಿಯೇ ಅವನಿಗೆ ಗ್ರಾಮ ಜೀವನ ಹೆಚ್ಚು ಆತ್ಮೀಯವೂ, ಸಂತೋಷದಾಯಕವೂ ಅನಿಸಹತ್ತಿತು. ನನ್ನ ಅಣ್ಣನವರಿಗೆ ಮಕ್ಕಳಿಲ್ಲದಿದ್ದುದರಿಂದ ಸಂತೋಷನನ್ನು ತಾವಿದ್ದ ಬೆಂಗಳೂರಿಗೆ ಕರೆದುಕೊಂಡು ಹೋಗಿ ಸಾಕಿ-ಸಲುಹಿ-ಶಿಕ್ಷಣಗೊಟ್ಟು ತಮ್ಮವನನ್ನಾಗಿ ಮಾಡಿಕೊಳ್ಳಲು ಅಣ್ಣ ಮತ್ತು ಅತ್ತಿಗೆ ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಗಲಿಲ್ಲ. ನಗರ ಜೀವನ ಅವನಿಗೆ ಒಗ್ಗದೇ ಹೋಯಿತು. ಗ್ರಾಮ ಜೀವನದ ಸೆಳೆತ ಹೆಚ್ಚಾಯಿತು. ಪಾಲಿಟೆಕ್ನಿಕ್ ಡಿಪ್ಲೋಮ ಮುಗಿಸಿದ ನಂತರ, ಮುಂದೆ ಇಂಜಿನಿಯರಿಂಗ್ ಶಿಕ್ಷಣಕ್ಕಾಗಿ ನಗರದಲ್ಲಿ ಇರಬೇಕಾಗಿ ಬಂದಾಗ ಅಲ್ಲಿಯೂ ತುಂಬಾ ಕಷ್ಟವೆನಿಸಿ ಹಾಗೂ ಅಲ್ಲಿ ಇರಲು ಯಾವುದೇ ಸರಿಯಾದ ಸೌಕರ್ಯ ಇಲ್ಲದ್ದರಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಮೇಲುಕೋಟೆಗೆ ಬಂದ. ಆಗ ಅವನು ೨೦ರ ಹರೆಯದ ಯುವಕ. ನಾನು ಯಾವ ವಯಸ್ಸಿನಲ್ಲಿ ಸರ್ವೋದಯ ಕೆಲಸದಲ್ಲಿ ತೊಡಗಿದ್ದೆನೋ ಅಷ್ಟೇ ವಯಸ್ಸು ಅವನದ್ದಾಗಿತ್ತು. ಕ್ರಮೇಣ ಅವನು ಟ್ರಸ್ಟಿನ ಕಾರ್ಯಚಟುವಟಿಕೆಗಳಲ್ಲಿ ಆಸಕ್ತಿವಹಿಸುತ್ತಾ ಬಂದ. ಟ್ರಸ್ಟ್ ಗ್ರಾಮೀಣ ಪ್ರದೇಶದಲ್ಲಿಯೇ ಇರುವುದರಿಂದ, ಕಾರ್ಯಕ್ಷೇತ್ರ ಗ್ರಾಮೀಣ ಪ್ರದೇಶಕ್ಕೆ ಸೀಮಿತವಾಗಿರುವುದರಿಂದ ಗ್ರಾಮಕ್ಕೆ ಬಂದು ಅಲ್ಪ ಸಂಭಾವನೆಯಲ್ಲಿ ಟ್ರಸ್ಟಿನ ಧ್ಯೇಯೋದ್ದೇಶಗಳಿಗನುಗುಣವಾಗಿ

ಕೆಲಸಮಾಡುವಂಥವರು ಸಿಗುವುದು ಕಠಿಣವಾದದ್ದರಿಂದ ಮತ್ತು ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಯುವಶಕ್ತಿ ಬೇಕಾದುದರಿಂದ ಟ್ರಸ್ಟಿನ ಧರ್ಮದರ್ಶಿಗಳು ಸಂತೋಷನನ್ನು ಕೂಡ ಓರ್ವ ಧರ್ಮದರ್ಶಿಯನ್ನಾಗಿ ಮಾಡಿಕೊಳ್ಳಲು ತೀರ್ಮಾನಿಸಿದರು. ಅವನು ಧರ್ಮದರ್ಶಿಯಾಗಿ ಮತ್ತು ನನ್ನ ಸಹಾಯಕನಾಗಿ ಕೆಲಸಮಾಡಲು ಪ್ರಾರಂಭಿಸಿದ. ಹಲವಾರು ವರ್ಷಗಳಲ್ಲಿ ಅವನು ಟ್ರಸ್ಟಿನ ಪ್ರಮುಖ ಸದಸ್ಯನಾಗಿ ಹೋದ. ಮುಂದೆ ಕಾಲಕ್ರಮೇಣ ಹೆಚ್ಚಿನ ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾ ಕಾರ್ಯಮಾಡಲಾರಂಭಿಸಿದ ನಾನು ವಯಸ್ಸಿಗನುಗುಣವಾದ ರೀತಿಯಲ್ಲಿ ನಿವೃತ್ತನಾಗಬೇಕೆಂದು ಬಯಸಿದಾಗ ಧರ್ಮದರ್ಶಿ ಮಂಡಲಿ ಸಹಜವಾಗಿ ಸಂತೋಷನನ್ನು ಕಾರ್ಯದರ್ಶಿಯನ್ನಾಗಿ ಮಾಡಿತು. ಈಗ ಕಳೆದ ಕೆಲ ವರ್ಷಗಳಿಂದ ಅವನು ಕಾರ್ಯದರ್ಶಿಯವಾಗಿ ಕೆಲಸ ಮಾಡುತ್ತಿದ್ದಾನೆ. ಟ್ರಸ್ಟಿನ ಕಾರ್ಯಕ್ರಮಗಳಿಗೆ ಹೊಸ ಆಯಾಮ ತಂದುಕೊಟ್ಟಿದ್ದಾನೆ. ದತ್ತು ಕೇಂದ್ರ ಪ್ರಾರಂಭವಾಗಿದೆ, ಖಾದಿ ಕೆಲಸ ವಿಶೇಷವಾಗಿ ನಡೆಯುತ್ತಿದೆ, ಹೊಸ ಜೀವನ ದಾರಿ ಕೇಂದ್ರದಲ್ಲಿ ಸುಮಾರು ೨೦ರಿಂದ ೩೦ಲಕ್ಷರೂಗಳಲ್ಲಿ ಕಟ್ಟಡದ ನಿರ್ಮಾಣವಾಗುತ್ತಿದೆ. ಹೊಸ ಜೀವನದಾರಿ ಕೇಂದ್ರದಲ್ಲಿ ಯುವ ಶಿಬಿರಗಳ ಸರಣಿ ನಡೆಯುತ್ತಾ ಇದೆ. ರಾಜ್ಯದ ವಿವಿಧ ಸ್ಥಳಗಳಿಂದ ವಿದ್ಯಾರ್ಥಿಗಳು ಮತ್ತು ಯುವಕರು ಹೊಸ ಜೀವನ ದಾರಿ ಕೇಂದ್ರದಲ್ಲಿ ಶಿಬಿರ ನಡೆಸಿ ವಿಶೇಷ ಅನುಭವಗಳನ್ನು ಪಡೆಯುತ್ತಿದ್ದಾರೆ. ನನ್ನ ಎರಡನೆಯ ಮಗನಾದ ಸುಘೋಷ್ ಕೂಡ ಹೊಸ ಜೀವನ ದಾರಿ ಕೇಂದ್ರದ ಅಭಿವೃದ್ಧಿಗಾಗಿ ಕೆಲಸ ಮಾಡಿದ. ಈ ರೀತಿ ಎರಡನೇ ತಲೆಮಾರಿನವರು ಟ್ರಸ್ಟನ್ನು ಮುನ್ನಡೆಸಿಕೊಂಡು ಬಂದಿದ್ದಾರೆ.

ಇನ್ನು ಮೂರನೆಯ ತಲೆಮಾರಿನ ಮಕ್ಕಳಾದ ಸುಮನಸ್, ಸುಹಾಸಿನಿ ಮತ್ತು ಸುಪ್ರಜ್ ಹಾಗೂ ಗೌರಿ ಮತ್ತು ಸಮೀಪ ಕೂಡ ಒಂದಲ್ಲ ಒಂದು ರೀತಿಯಲ್ಲಿ ಟ್ರಸ್ಟಿನ ಕಾರ್ಯಚಟುವಟಿಕೆಗಳಿಂದ ಪ್ರಭಾವಿತರಾಗಿದ್ದಾರೆ ಮತ್ತು ಸಾರ್ವಜನಿಕ ಕೆಲಸಕಾರ್ಯಗಳಲ್ಲಿ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಸ್ವಶಕ್ತಿಯಿಂದ ಸಮಾಜಹಿತ ಕಾರ್ಯಮಾಡಬೇಕೆಂಬ ಮನೋಬಲ ಬೆಳೆಸಿಕೊಳ್ಳುತ್ತಿದ್ದಾರೆ. ಐದೂ ಮೊಮ್ಮಕ್ಕಳು ಮೇಲುಕೋಟೆಯಲ್ಲಿಯೇ ಜನಿಸಿದ್ದಾರೆ. ತಮ್ಮ ಬಾಲ್ಯದಿಂದಲೂ ಟ್ರಸ್ಟಿಗೆ ಬರುವ ಅಭಿಮಾನಿಗಳನ್ನು, ಸ್ನೇಹಿತರನ್ನು, ಕಲಾವಿದರನ್ನು, ಸಾಹಿತಿಗಳನ್ನು, ಸಮಾಜಸೇವಾಕಾರ್ಯಕರ್ತರನ್ನು ನೋಡುತ್ತಾ ಬೆಳೆದಿದ್ದಾರೆ. ಮೇಲುಕೋಟೆಯಲ್ಲಿಯ ಸರ್ಕಾರಿ ಶಾಲೆಗಳಲ್ಲಿಯೇ ವಿದ್ಯಾಭ್ಯಾಸಮಾಡಿದ್ದಾರೆ. ಹಿರಿಯ ಮೊಮ್ಮಗ ಸುಮನಸ್ ವಿಜ್ಞಾನ ಪದವಿಯನ್ನು ಮೈಸೂರಿನ ಮಹಾರಾಜ ಕಾಲೇಜಿನ ಮೂಲಕ ಪಡೆದಾದ ನಂತರ ಆಕ್ಸ್‌ಫರ್ಡ್ ಯೂನಿವರ್ಸಿಟಿಯ ಪದವೀಧರನಾಗಿದ್ದಾನೆ. ಆಕ್ಸ್‌ಫರ್ಡ್ ವಿದ್ಯಾಭ್ಯಾಸಕ್ಕಾಗಿ ಕೇಂದ್ರ ಸರ್ಕಾರದ ಧನ ಸಹಾಯ ತನ್ನ ಸ್ವಪ್ರಯತ್ನದಿಂದ ಪಡೆದುಕೊಂಡನು. ಬಯೋಡೈವರ್ಸಿಟಿ ಕಾನ್ಸರ್‌ವೇಶನ್ ಅಂಡ್ ಮ್ಯಾನೇಜ್‌ಮೆಂಟ್ ೨೦೧೩-೧೪ನೇ ಸಾಲಿನಲ್ಲಿ ಎಂ.ಎಸ್ಸಿ ಪದವಿಯನ್ನು ಪಡೆದುಕೊಂಡನು. ಇತ್ತೀಚೆಗೆ

ದೇಸೀ ಹತ್ತಿಯ ಬೆಳೆಯ ಬಗ್ಗೆ ಹೆಚ್ಚಿನ ವಿಷಯ ತಿಳಿದುಕೊಳ್ಳಲು ದೇಶದ ವಿವಿಧ ರಾಜ್ಯಗಳಿಗೆ ಅಧ್ಯಯನ ಪ್ರವಾಸ ಕೈಗೊಂಡು ಆ ಬಗ್ಗೆ ಪ್ರೌಢ ಪ್ರಬಂಧವನ್ನು ಬರೆದಿದ್ದಾನೆ. ಖಾದಿ ವಿಚಾರದಲ್ಲಿಯೂ ಆಸಕ್ತಿವಹಿಸಿ Khadi Production In India : A Green Economy ಎಂಬ ಅವನ ಲೇಖನ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯಲ್ಲಿ ಪ್ರಕಟಗೊಂಡಿದೆ. ಇತ್ತೀಚೆಗೆ ಚಂಡೀಘಡದಲ್ಲಿ ನಡೆದ ದ್ವೈವಾರ್ಷಿಕ ಪರಿಸರ ಕುರಿತಾದ ಸಭೆಯಲ್ಲಿ ಭಾಗವಹಿಸಿ ನಂತರ ಸಬರಮತಿ ಆಶ್ರಮ ಮತ್ತು ಸೇವಾಗ್ರಾಮ ಆಶ್ರಮಕ್ಕೂ ಮತ್ತು ವಿನೋಬಾರವರ ಪವನಾರ ಆಶ್ರಮಕ್ಕೂ ಇನ್ನಿತರ ಗಾಂಧಿ ಪ್ರಣಿತ ಆಶ್ರಮಗಳಿಗೆ ಭೇಟಿಕೊಟ್ಟು ಬಂದಿದ್ದಾನೆ. ಇತ್ತೀಚೆಗೆ ನಡೆದ ಬದನವಾಳು ಸತ್ಯಾಗ್ರಹದ ಅಂಗವಾಗಿ ಕೈಗೊಳ್ಳಲಾಗಿದ್ದ ಪಾದಯಾತ್ರೆಯಲ್ಲಿ ಮತ್ತು ಸುಸ್ಥಿರ ಜೀವನ ಪದ್ಧತಿಯ ರಾಷ್ಟ್ರೀಯ ಸಮಾವೇಶದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾನೆ. ಇನ್ನೊಬ್ಬ ಮೊಮ್ಮಗನಾದ ಸುಪ್ರಜ್ ಹೋಮಿಯೋಪತಿ ವೈದ್ಯಕೀಯ ಶಾಸ್ತ್ರದಲ್ಲಿ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದಾನೆ. ಪದವೀಧರನಾದ ಮೇಲೆ ಗ್ರಾಮಗಳಲ್ಲಿಯೇ ನೆಲೆಸಿ ಜನಸಾಮಾನ್ಯರಿಗೆ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಸೇವೆ ಲಭ್ಯವಾಗಿಸುವ ಆಸೆಯನ್ನಿರಿಸಿಕೊಂಡಿದ್ದಾನೆ. ಮೊಮ್ಮಗಳಾದ ಸಹಾಸಿನಿ ಮಹಾರಾಣಿ ಕಾಲೇಜಿನಲ್ಲಿ ಬಿ.ಎ. ಓದುತ್ತಿದ್ದಾಳೆ. ಭರತನಾಟ್ಯದಲ್ಲಿ ಪದವೀಧರಳಾಗಿ ಇತ್ತೀಚೆಗಷ್ಟೇ ರಂಗಪ್ರವೇಶಮಾಡಿದ್ದಾಳೆ. ಅವಳೂ ಕೂಡ ಯಥಾಶಕ್ತಿ ಯಥಾಮತಿ ಸಾರ್ವಜನಿಕ ಕೆಲಸ ಮಾಡುವ ಇಚ್ಛೆ ಇರಿಸಿಕೊಂಡಿದ್ದಾಳೆ. ಸುಪ್ರಜ್ ಮತ್ತು ಸುಹಾಸಿನಿ ಇಬ್ಬರೂ ಕೂಡ ಬದನವಾಳು ಪಾದಯಾತ್ರೆಯಲ್ಲಿ ತಾಯಿ ಗೀತ, ತಂದೆ ಸಂತೋಷ್‌ನೊಂದಿಗೆ ಸಕ್ರಿಯವಾಗಿ ಭಾಗವಹಿಸಿದ್ದಾರೆ.

ಈ ರೀತಿ ಮೂರನೇ ತಲೆಮಾರಿನವರು ಸಹ ಟ್ರಸ್ಟಿನ ಧ್ಯೇಯೋದ್ದೇಶಗಳನ್ನು ಮುನ್ನಡೆಸಿಕೊಂಡು ಹೋಗುತ್ತಿರುವುದನ್ನು ನೋಡಿ ಇಳಿವಯಸ್ಸಿನವರಾದ ನನಗೆ ಮತ್ತು ಗಿರಿಜಾ ಅವರಿಗೆ ಸಂತೋಷವು, ಹೆಮ್ಮೆಯು ಅನಿಸುತ್ತದೆ. ಇದರಿಂದ ಟ್ರಸ್ಟಿಗೂ, ನನ್ನ ಕುಟುಂಬಕ್ಕೂ ಯಾವ ರೀತಿ ಅವಿಭಾಜ್ಯ ಮತ್ತು ಅವಿನಾಭಾವ ಮತ್ತು ಕರುಳುಬಳ್ಳಿಯ ಸಂಬಂಧವಿದೆ ಎಂಬುದು ಗೊತ್ತಾಗುತ್ತದೆ. ಆದಾಗ್ಯೂ ಟ್ರಸ್ಟ್ ಶತಶಃ ಸಾರ್ವಜನಿಕ ಸಂಸ್ಥೆಯಾಗಿದೆ.

ಜನಪದ ನಿಲಯದ ಅಂತರಂಗದಲ್ಲಿ ಅಂಕಣದ ದಶಮಾನದ ಸಂದರ್ಭದಲ್ಲಿ ಬರೆದ ಈ ಮಾತುಗಳು ಸಹಜವಾಗಿ ವ್ಯಕ್ತವಾಗಿದೆ. ಯವುದೇ ರೀತಿಯ ಅಹಂಭಾವಕ್ಕೆ ಅವಕಾಶವಿಲ್ಲ. ಟ್ರಸ್ಟಿನ ಅರ್ಧಶತಮಾನದ ಸಕ್ರಿಯತೆಗೆ ಕಾರಣರಾಗಿರುವ ಮತ್ತು ಕಾರಣರಾಗುತ್ತಿರುವ ಎಲ್ಲ ಆತ್ಮೀಯ ದಾನಿಗಳಿಗೆ, ಅಭಿಮಾನಿಗಳಿಗೆ, ಕಾರ್ಯಕರ್ತರಿಗೆ, ಎಲ್ಲ ಧರ್ಮದರ್ಶಿಗಳಿಗೆ, ಸ್ವಯಂಸೇವಕರಿಗೆ ನಾನು ತುಂಬಾ ಆಭಾರಿಯಾಗಿದ್ದೇನೆ ಮತ್ತು ಅವರೆಲ್ಲರ ಸಹಕಾರವನ್ನು ಸದಾ ಬಯಸುತ್ತೇನೆ. ನಾರಾಯಣನೆಂಬ ಸಮಾಜ ಪುರುಷನಿಗೆ ಕೃತಜ್ಞತೆಯ ನಮನಗಳು. ✷

# ಸರ್ವೋದಯ ಆಂದೋಲನದ ಮುನ್ನಡೆ

ಸಮಸ್ತ ಭಾರತದಲ್ಲಿ ಸರ್ವೋಧಯ ಆಂದೋಲನವನ್ನು ಮುನ್ನಡೆಸುವ ಉದ್ದೇಶದಿಂದ ೧೯೫೦ರಿಂದ ದೇಶದ ಎಲ್ಲ ರಾಜ್ಯಗಳಲ್ಲಿ ಆಯಾ ರಾಜ್ಯದ ಸರ್ವೋದಯ ಮಂಡಲಿಗಳನ್ನು ಸ್ಥಾಪಿಸಲಾಯಿತು. ರಾಜ್ಯಗಳಲ್ಲಿ ಸರ್ವೋದಯ ಮಂಡಲಿಗಳು ಆಂದೋಲನವನ್ನು ಯಥಾಶಕ್ತಿ ಮುನ್ನಡೆಸಿಕೊಂಡು ಹೋಗುತ್ತಿವೆ. ಅವುಗಳಲ್ಲಿ ಕೆಲವು ವಿಶೇಷವಾಗಿ ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಇನ್ನು ಕೆಲವು ಸಾಧಾರಣವಾಗಿ ಕ್ರಿಯಾಶೀಲವಾಗಿವೆ. ಇನ್ನು ಕೆಲವು ಹೆಚ್ಚಿನ ಕ್ರಿಯಾಶೀಲತೆಯನ್ನು ಪಡೆಯಬೇಕಿದೆ.

ಕರ್ನಾಟಕದಲ್ಲಿಯೂ ೧೯೫೮ ರಲ್ಲಿ ರಾಜ್ಯಮಟ್ಟದ ಸರ್ವೋದಯ ಮಂಡಲಿಯ ಸ್ಥಾಪನೆಯಾಯಿತು. ಆಗ ಕರ್ನಾಟಕದಲ್ಲಿ ಭೂದಾನ ಪಾದಯಾತ್ರೆ ಮಾಡುತ್ತಿದ್ದ ಆಚಾರ್ಯ ವಿನೋಬಾಭಾವೆಯವರ ಆಶೀರ್ವಾದ ಮಂಡಲಿಗೆ ದೊರೆಯಿತು. ಅಂದಿನಿಂದ ೫೬ವರ್ಷಗಳವರೆಗೆ ರಾಜ್ಯ ಸರ್ವೋದಯ ಮಂಡಲಿ ಆಂದೋಲನವನ್ನು ನಡೆಸಿಕೊಂಡು ಬರುತ್ತಿದೆ. ಅದರ ಕಾರ್ಯತತ್ಪರತೆಯಲ್ಲಿ ಅನೇಕ ಏರಿಳಿತಗಳಾಗಿವೆ.

ಈಗ ೨೧ನೇ ಶತಮಾನಕ್ಕನುಗುಣವಾಗಿ ರಾಜ್ಯ ಸರ್ವೋದಯ ಮಂಡಲಿಯನ್ನು ಬಲಪಡಿಸಬೇಕಿದೆ. ದೇಶ ವಿದೇಶಗಳಲ್ಲಿ ಆಗುತ್ತಿರುವ ರಾಜಕೀಯ, ಆರ್ಥಿಕ, ವೈಜ್ಞಾನಿಕ ಮತ್ತು ಸೈನ್ಯವಾದದ ಬೆಳವಣಿಗೆಗಳನ್ನು ಗಮನದಲ್ಲಿರಿಸಿಕೊಂಡು ಉಂಟಾಗುತ್ತಿರುವ ಎಲ್ಲ ಬಗೆಯ ಸಮಸ್ಯೆಗಳಿಗೆ ಸರ್ವೋದಯ ದೃಷ್ಟಿಯ ಪರಿಹಾರೋಪಾಯಗಳೊಡನೆ ಮುಖಾಮುಖಿಯಾಗಿ ನಿಲ್ಲುವ ಸಾಮರ್ಥ್ಯವನ್ನು ಸರ್ವೋದಯ ಮಂಡಲಿಗೆ ತರಬೇಕಾಗಿದೆ.

ಹೊಸ ಸನ್ನಿವೇಶದ ಸಂದರ್ಭದಲ್ಲಿ ರಾಜ್ಯ ಸರ್ವೋದಯ ಮಂಡಲಿಯ ಬಲಸಂವರ್ಧನೆಯ ನಿಮಿತ್ತ ಕಳೆದ ಏಪ್ರಿಲ್ ಐದರಂದು ಮೇಲುಕೋಟೆಯಲ್ಲಿ ಸರ್ವೋದಯ ಸಿದ್ಧಾಂತದ ಬಗ್ಗೆ ಅಭಿಮಾನ ಇಟ್ಟಿರುವ ಮಿತ್ರರ ಮತ್ತು ಮರಳಿ ಹಳ್ಳಿಗಳಿಗೆ ಬಂದು ವ್ಯವಸಾಯದಲ್ಲಿ ತೊಡಗಿರುವ ವಿದ್ಯಾವಂತ ಯುವಕರನ್ನು ಒಳಗೊಂಡ ಸಭೆ ನಡೆಯಿತು. ಈ ಸಭೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಎಪ್ಪತ್ತು ಜನ ಮಿತ್ರರು ಭಾಗವಹಿಸಿದ್ದರು. ಅವರೆಲ್ಲ ರಾಜ್ಯ ಸರ್ವೋದಯ ಮಂಡಲಿಯನ್ನು ಬಲಪಡಿಸುವ ಅಗತ್ಯವಿದೆಯೆಂಬ ತೀರ್ಮಾನಕ್ಕೆ ಬಂದರು ಮತ್ತು ಕೆಲವರು ತಮ್ಮ ತಮ್ಮ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸರ್ವೋದಯ ಮಂಡಲಿಗಳನ್ನು ರಚಿಸುವುದಾಗಿ ಸಂಕಲ್ಪಿಸಿದರು.

ಸಭೆಯ ಪೂರ್ವದಲ್ಲಿ ಸುರೇಂದ್ರ ಕೌಲಗಿಯವರು ಬಂದಿದ್ದ ಎಲ್ಲ ಮಿತ್ರರನ್ನು ರಾಜ್ಯ ಮತ್ತು ರಾಷ್ಟ್ರಮಟ್ಟದ ಸರ್ವೋದಯ ಮಂಡಲಿಗಳ ಪರವಾಗಿ ಹಾಗೂ ಜನಪದ ಸೇವಾ ಟ್ರಸ್ಟ್ ಪರವಾಗಿ ಸ್ವಾಗತಿಸಿದರು. ಗಾಂಧೀಜಿಯವರ ಹತ್ಯೆಯ ನಂತರ ಸರ್ವೋದಯ ಆಂದೋಲನವನ್ನು ಸಂಘಟಿಸಿಕೊಂಡು ಬಂದ ಐತಿಹಾಸಿಕ ಸಂಗತಿಗಳನ್ನು ತಿಳಿಸಿದರು. ಸರ್ವೋದಯ ಆಂದೋಲನದ ಪ್ರಾಥಮಿಕ ಆದರೆ ಬಹು ಮುಖ್ಯವಾದ ಲೋಕಸೇವಕತ್ವದ ಬಗ್ಗೆ ತಿಳಿಸಿ ಸಾಧ್ಯವಾದಷ್ಟು ಜನ ಲೋಕಸೇವಕರಾಗಬೇಕೆಂದು ವಿನಂತಿಸಿಕೊಂಡರು. ಲೋಕಸೇವಕರಾಗಲು ಸಾಧ್ಯವಿರದವರು ಸರ್ವೋದಯ ಮಿತ್ರರಾಗಬಹುದೆಂದು ತಿಳಿಸಿದರು. ಇದಕ್ಕೂ ಮುನ್ನ ಲೋಕಸೇವಕರ ಮತ್ತು ಸರ್ವೋದಯ ಮಿತ್ರರ ಅರ್ಹತೆಗಳನ್ನು ವಿವರಿಸಿದ್ದರು. ಅವರ ಮನವಿಯ ಮೇರೆಗೆ ೨೫ಜನ ಲೋಕಸೇವಕರು ಮತ್ತು ೮ಜನ ಸರ್ವೋದಯ ಮಿತ್ರರಾದರು. ಅವರ ಹೆಸರುಗಳನ್ನು ಕೊನೆಯಲ್ಲಿ ಕಾಣಿಸಲಾಗಿದೆ.

ಸಭೆಯಲ್ಲಿ ಅಖಿಲ ಭಾರತ ಸರ್ವೋದಯ ಮಂಡಲದ ಮಹಾ ಕಾರ್ಯದರ್ಶಿಗಳಾದ ಟಿ.ಎನ್.ಆರ್.ಪ್ರಭು ಮತ್ತು ಶೇಖ್ ಹುಸೇನ್ ಹಾಗೂ ಪ್ರಮುಖ ಸದಸ್ಯರಾಗಿರುವ ಇ.ಪಿ.ಮೆನನ್ ಹಾಜರಿದ್ದರು. ಮತ್ತು ಅವರು ಚರ್ಚೆಗೆ ಮಾರ್ಗದರ್ಶನವಿತ್ತರು.

ಸಭೆಯಲ್ಲಿ ನಬಾರ್ಡಿನ ಅಧಿಕಾರಿ ಬಿಂದು ಮಾಧವ ವಡವಿ, ಆಕಾಶವಾಣಿಯ ಎನ್.ಕೇಶವಮೂರ್ತಿ, ದೀನಬಂಧು ಟ್ರಸ್ಟಿನ ಜಿ.ಎಸ್.ಜಯದೇವ್ ಹಾಗೂ ಎಂ.ಕೃಷ್ಣ, ಹಾವೇರಿಯ ಶಂಕರೇಗೌಡರ್ ಹಾಗೂ ಶ್ರೀಮತಿ.ಸುನೀತ, ಹಾಸನದ ಎಸ್.ಎನ್.ಯೋಗೇಶಪ್ಪ ಮತ್ತು ಹೆಚ್.ಎನ್.ಶಿವಣ್ಣ, ಕೆ.ವೆಂಕಟರಾಜು, ಅಬೀದಾಬೇಗಂ ಇನ್ನೂ ಮುಂತಾದವರು ಮಾತನಾಡಿದರು ಮತ್ತು ತಮ್ಮ ಬೆಂಬಲ ಸೂಚಿಸಿದರು. ಸುನೀತಾ ಶಂಕರಗೌಡರ್‌ರವರು ಪರಿಸರ ಗೀತೆ ಹಾಗೂ ಡಾ.ಜಿ.ಎಸ್.ಶಿವರುದ್ರಪ್ಪನವರ ಕವನವನ್ನು ಹಾಡಿದರು.

ಕರ್ನಾಟಕ ಸರ್ವೋದಯ ಮಂಡಲಿಯ ಕಾರ್ಯಾಧ್ಯಕ್ಷರಾದ ಹೆಚ್.ಎನ್.ನರಸಿಂಹಯ್ಯ, ಸಂಘಟನಾ ಕಾರ್ಯದರ್ಶಿಗಳಾದ ಹೆಚ್.ಎಸ್.ಸುರೇಶ್ ಮತ್ತು ಹೆಚ್.ಸಿ.ನರೇಂದ್ರ ಸಭೆಯ ಕಾರ್ಯಕಲಾಪದ ಯಶಸ್ಸಿಗೆ ಕಾರಣರಾದರು. ಸಭೆಗೆ ಅಗತ್ಯವಾಗಿದ್ದ ಆಸನದ ವ್ಯವಸ್ಥೆಯನ್ನು ಮೇಲುಕೋಟೆ ಗ್ರಾಮದ ಭಗವಾನ್‌ರವರು ಉಚಿತವಾಗಿ ಮಾಡಿಕೊಟ್ಟರು. ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

## ೨೦೧೫-೧೬ನೇ ಸಾಲಿಗೆ ಆದ ಲೋಕಸೇವಕರು ಮತ್ತು ಸರ್ವೋದಯ ಮಿತ್ರರ ಹೆಸರುಗಳು ಇಂತಿವೆ :-

| ಕ್ರ ಸಂ. | ಲೋಕಸೇವಕರ ಹೆಸರು |
|---|---|
| ೧ | ಶ್ರೀ.ತಿಮ್ಮಾರೆಡ್ಡಿ.ಎಮ್ |
| ೨ | ಶ್ರೀ.ದಿಲೀಪ್‌ಕುಮಾರ್.ಎಸ್.ಜಿ |
| ೩ | ಶ್ರೀ.ಜಿ.ಮೋಹನಾಥರೆಡ್ಡಿ |
| ೪ | ಶ್ರೀ.ಡಿ.ಹೆಚ್.ಭೀಮಾರೆಡ್ಡಿ |
| ೫ | ಶ್ರೀ.ಎಮ್.ಜಿ.ರವಿ |
| ೬ | ಶ್ರೀಮತಿ.ನಾಗವೇಣಿ.ಎನ್.ವಿ |
| ೭ | ಶ್ರೀಮತಿ.ಬಿ.ಜಿ.ಉಮ |
| ೮ | ಶ್ರೀ.ಹೆಚ್.ಕೆ.ರಾಜೇಶ್ |
| ೯ | ಶ್ರೀ.ಕೊಕ್ಕಡವೆಂಕಟ್ರಮಣ ಭಟ್ |
| ೧೦ | ಶ್ರೀ.ಸುರೇಂದ್ರ ಕೌಲಗಿ |
| ೧೧ | ಶ್ರೀ.ಡಿ.ಸುದರ್ಶನ್ |
| ೧೨ | ಶ್ರೀ.ಎಸ್.ಎನ್.ಯೋಗೇಶಪ್ಪ |
| ೧೩ | ಶ್ರೀ.ಶೇಷಶೆಟ್ಟಿ |
| ೧೪ | ಶ್ರೀಮತಿ.ಎನ್.ಎಸ್.ಸುಮಂಗಲ |
| ೧೫ | ಶ್ರೀಮತಿ.ಲೀಲಾ ಶಿವಕುಮಾರ |
| ೧೬ | ಶ್ರೀ.ಎನ್.ಕೇಶವಮೂರ್ತಿ |
| ೧೭ | ಶ್ರೀ. ಶಿವಣ್ಣ |
| ೧೮ | ಶ್ರೀ.ಬಿಂದುಮಾಧವ ವಡವಿ |
| ೧೯ | ಶ್ರೀ.ಲಕ್ಷ್ಮೀನಾರಾಯಣ ಶಾಸ್ತ್ರೀ |
| ೨೦ | ಅಬೀದಾ ಬೇಗಮ್ |
| ೨೧ | ಕೆ.ವೆಂಕಟರಾಜು |
| ೨೨ | ಶ್ರೀ.ಎ.ಎಸ್.ಮಹೇಶ್ |
| ೨೩ | ಶ್ರೀ.ಬಿ.ಶಿವಲಿಂಗಯ್ಯ |
| ೨೪ | ಶ್ರೀ.ಶಂಕರಗೌಡ ಸಿ.ಗಂಗನಗೌಡ್ರ |
| ೨೫ | ಹನುಮಂತರಾಯಪ್ಪ |

| ಕ್ರ. ಸಂ. | ಸರ್ವೋದಯ ಮಿತ್ರರ ಹೆಸರು |
|---|---|
| ೧ | ಶ್ರೀ.ಬಿ.ಶಿವಲಿಂಗಯ್ಯ |
| ೨ | ಶ್ರೀ.ಮೊಹಮ್ಮದ್ ಯಾಕುಬ್ ಪಾಷ |
| ೩ | ಶ್ರೀ.ಟಿ.ಕೆ.ಆಂಜನಪ್ಪ |
| ೪ | ಎಮ್.ವಿ.ಶ್ರೀನಿವಾಸನ್ |
| ೫ | ಹೆಚ್.ಎಸ್.ಸುರೇಶ್ |
| ೬ | ಶ್ರೀ.ಮಂಗ್ಳೂರ ವಿಜಯ |
| ೭ | ವೈ.ಎನ್.ಪರಮಶಿವಯ್ಯ |
| ೮ | ಶ್ರೀ.ದೇವರಾಜ್ |

ಕರ್ನಾಟಕ ಸರ್ವೋದಯ ಮಂಡಲಿಯ ವತಿಯಿಂದ ಲೋಕಸೇವಕರಿಗಾಗಿ ಬರೆಯಲಾದ ಪತ್ರದ ಒಕ್ಕಣೆಯನ್ನು ಕೆಳಗೆ ಕೊಡಲಾಗಿದೆ.

ಸರ್ವೋದಯ ಸಿದ್ಧಾಂತಕ್ಕೆ ಮನ್ನಣೆ ಕೊಟ್ಟು ನೀವು ದಿನಾಂಕ:೦೫/೦೪/೨೦೧೫ ಭಾನುವಾರದಂದು ಮೇಲುಕೋಟೆಯಲ್ಲಿ ನಡೆದ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ಅಭಿವಂದನೆ.

ನಿಷ್ಕ್ರಿಯತೆಯ ಮರಳಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ಕರ್ನಾಟಕ ಸರ್ವೋದಯ ಮಂಡಲಿಯ ತೇರು ಸಕ್ರಿಯವಾಗಿ ಮುಂದ್ಹೋಗುವಂತೆ ಮಾಡಿದ್ದೀರಿ. ಅದಕ್ಕಾಗಿ ಕೃತಜ್ಞ. ನೀವು ಲೋಕಸೇವಕತ್ವವನ್ನು ಅಂಗೀಕರಿಸಿದ್ದಕ್ಕಾಗಿ ಅಖಿಲ ಭಾರತ ಮತ್ತು ರಾಜ್ಯದ ಸರ್ವೋದಯ ಮಂಡಲಿಗಳ ಅಭಿವಂದನೆ. ನಿಮ್ಮ ಉತ್ಸಾಹದ ಬಲದಿಂದಲೂ, ನಿಷ್ಠೆಯ ಬಲದಿಂದಲೂ ಕರ್ನಾಟಕ ರಾಜ್ಯದ ಸರ್ವೋದಯ ಮಂಡಲಿ ಶಕ್ತಿಪಡೆಯುವುದಾಗಿ ಆಶಿಸುತ್ತೇವೆ.

ನೀವು ಆದಷ್ಟು ಬೇಗ ನಿಮ್ಮ ಜಿಲ್ಲಾ ಸರ್ವೋದಯ ಮಂಡಲಿಯನ್ನು ರಚಿಸಿಕೊಳ್ಳಬೇಕಾಗಿ ವಿನಂತಿ. ರಚಿತಗೊಳ್ಳುವ ಜಿಲ್ಲಾ ಮಂಡಲಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರು ರಾಜ್ಯ ಸರ್ವೋದಯ ಮಂಡಲಿಯ ಕಾರ್ಯಕಾರಿ ಮಂಡಲಿಯ ಸದಸ್ಯರಾಗುವರು ಮತ್ತು ಅಖಿಲ ಭಾರತ ಸರ್ವೋದಯ ಮಂಡಲಿಯ ರಾಷ್ಟ್ರ ಮಟ್ಟದ ಸಭೆಯಲ್ಲಿ ಭಾಗವಹಿಸುವರು.

ನಿಮಗೆ ಗೊತ್ತಿರುವಂತೆ ಜಿಲ್ಲಾ ಸರ್ವೋದಯ ಮಂಡಲಿ ರಚಿತವಾಗಲು ಹತ್ತು ಜನ ಲೋಕಸೇವಕರು ಮತ್ತು ಹದಿನೈದು ಜನ ಸರ್ವೋದಯ ಮಿತ್ರರು ಇರಬೇಕು. ನಿಮ್ಮ ಜಿಲ್ಲೆಯಲ್ಲಿರುವ ಲೋಕಸೇವಕರು ಮತ್ತು ಸರ್ವೋದಯ ಮಿತ್ರರ ಹೆಸರನ್ನು ಮತ್ತು ಅವರ ದೂರವಾಣಿ ಸಂಖ್ಯೆಯನ್ನು ಈ ಕಾಗದದ ಹಿಂದೆ ಕಾಣಿಸಲಾಗಿದೆ. ನೀವು ಪರಸ್ಪರ ಸಂಪರ್ಕಿಸಿ ಜಿಲ್ಲಾ ಸರ್ವೋದಯ ಮಂಡಲಿಯನ್ನು ರಚಿಸಿಕೊಳ್ಳಬೇಕಾಗಿ ವಿನಂತಿ. ನಿಮ್ಮ ಜಿಲ್ಲೆಯಲ್ಲಿ ತಾಲ್ಲೂಕು ಮಟ್ಟದ ಸರ್ವೋದಯ ಮಂಡಲಿ ರಚಿತವಾಗಿರುವ ಸಾಧ್ಯತೆ ಇದೆ. ಅದರ ಪದಾಧಿಕಾರಿಗಳ ಸಹಕಾರವನ್ನು ಕೂಡ ಪಡೆಯಬಹುದು. ಜಿಲ್ಲಾ ಸರ್ವೋದಯ ಮಂಡಲಿಯ ರಚನೆಯನ್ನು ಜೂನ್ ೨೦೧೫ರ ಅಂತ್ಯದೊಳಗಾಗಿ ಮಾಡಿ ನಮಗೆ ತಿಳಿಸಬೇಕಾಗಿ ವಿನಂತಿ. ಮುಂದಿನ ಕೆಲವೇ ತಿಂಗಳುಗಳಲ್ಲಿ ರಾಜ್ಯ ಮಟ್ಟದ ಸರ್ವೋದಯ ಮಂಡಲಿಯ ಸುವರ್ಣ ಜಯಂತಿಯನ್ನು ಆಚರಿಸಲು ಅನುಕೂಲವಾಗುವುದು. ಯಾವುದೇ ವಿಷಯದಲ್ಲಿ ಸಲಹೆ, ಸೂಚನೆ ಅಥವಾ ಮಾರ್ಗದರ್ಶನ ಬೇಕಿದ್ದಲ್ಲಿ ಶ್ರೀ.ಸುರೇಂದ್ರ ಕೌಲಗಿರವರನ್ನಾಗಲಿ, ಶ್ರೀ.ಎಲ್.ನರಸಿಂಹಯ್ಯರವರನ್ನಾಗಲಿ, ಶ್ರೀ.ಹೆಚ್.ಎಸ್. ಸುರೇಶ್‌ರವರನ್ನಾಗಲಿ ಸಂಪರ್ಕಿಸಬಹುದು.

ಉತ್ಸಾಹಿಗಳಾದ ನಿಮಗೆ ಮಹತ್ವದ ಈ ಕಾರ್ಯವನ್ನು ನೆರವೇರಿಸಿಕೊಡಲು ದೇವರು ಶಕ್ತಿಯನ್ನು ಕೊಡಲೆಂದು ಹಾರೈಸುತ್ತೇವೆ.

ಇತಿ ನಿಮ್ಮ ವಿಶ್ವಾಸಿ, (ಸುರೇಂದ್ರ ಕೌಲಗಿ)

## ಲೋಕಸೇವಕರ ಪ್ರತಿಜ್ಞೆ

## KANNADA VERSION OF LOKSEVAK PLEDGE

೧. ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅವುಗಳಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆಯೆಂದು ಘೋಷಿಸುತ್ತೇನೆ. ಅವುಗಳನ್ನು ನನ್ನ ವ್ಯಕ್ತಿಗತ ಜೀವನ ಮತ್ತು ಸಾಮಾಜಿಕ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಎಲ್ಲ ಪ್ರಯತ್ನ ಮಾಡುತ್ತೇನೆ.

೨. ಸತ್ಯ, ಅಹಿಂಸೆ, ಉತ್ಪಾದಕ ಶರೀರ ಶ್ರಮ ಮತ್ತು ಸಮಾನತೆಗಳನ್ನು ಜೀವನದ ಮೌಲ್ಯಗಳೆಂದು ಒಪ್ಪುತ್ತೇನೆ. ಕೃಷಿ, ತೋಟಗಾರಿಕೆ, ನೂಲುಗಾರಿಕೆ, ಸ್ವಚ್ಛತೆ ಮತ್ತು ಗೊಬ್ಬರ ತಯಾರಿಕೆ ಮುಂತಾದ ಒಂದಿಲ್ಲಒಂದು ಶ್ರಮದ ಕೆಲಸವನ್ನು ನಿಯಮಿತವಾಗಿ ಮಾಡುತ್ತೇನೆ. ನನ್ನ ಬಟ್ಟೆಗಾಗಿ ಪ್ರಮಾಣಿತ ಖಾದಿಯನ್ನೇ ಉಪಯೋಗಿಸುತ್ತೇನೆ. ಮದ್ಯಪಾನ ಮತ್ತು ಇತರ ನಶೆಗಳಿಂದ ದೂರವಿರುತ್ತೇನೆ: ಅಸ್ಪೃಶ್ಯತೆ ಆಚರಿಸುವುದಿಲ್ಲ. ಎಲ್ಲ ಧರ್ಮಗಳ ಬಗ್ಗೆ ಸರಿಸಮಾನ ಗೌರವವಿದೆ. ಸ್ತ್ರೀ ಮತ್ತು ಪುರುಷರಲ್ಲಿ ಸಮಾನ ನಂಬಿಕೆ ಇದೆ.

೩. ಲೋಕನೀತಿಯೊಂದೆ ಪ್ರಜಾಪ್ರಭುತ್ವವನ್ನು ತರಬಲ್ಲದೆಂದು ಮತ್ತು ಅದೊಂದೆ ಪ್ರತಿವ್ಯಕ್ತಿಗೆ ನಿಜ ಸ್ವಾತಂತ್ರ್ಯ ತರುವುದೆಂದು ನಾನು ದೃಢವಾಗಿ ನಂಬುತ್ತೇನೆ. ಈ ದೃಷ್ಟಿಯಿಂದ ನಾನು ಎಂದೂ ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗುವುದಿಲ್ಲ ಮತ್ತು ಯಾವುದೇ ರಾಜಕೀಯ ಅಧಿಕಾರಕ್ಕಾಗಿ ಸ್ಪರ್ಧೆ ಮಾಡುವುದಿಲ್ಲ. ಪ್ರಜಾಪ್ರಭುತ್ವದ ಮೂಲ ಉದ್ದೇಶಗಳನ್ನು ರಕ್ಷಿಸಲು ಮತ್ತು ಸ್ಥಾಪಿಸಲು ಸದಾ ಪ್ರಯತ್ನಿಸುತ್ತೇನೆ.

೪. ಸಮಾಜದಲ್ಲಿಯ ಕಟ್ಟ ಕಡೆಯ ಮನುಷ್ಯನನ್ನು ಗಮನದಲ್ಲಿರಿಸಿಕೊಂಡು ನಾನು ಸಮಾಜದ ಹಿತಕ್ಕಾಗಿ ನಿಸ್ವಾರ್ಥ ಭಾವನೆಯಿಂದ ಸೇವೆ ಮಾಡುತ್ತೇನೆ. ನನ್ನ ಗುರಿಗಳನ್ನು ಈಡೇರಿಸಿಕೊಳ್ಳಲು ಯಾವುದೇ ಬಗೆಯ ಅಪಮಾರ್ಗವನ್ನು ಅನುಸರಿಸುವುದಿಲ್ಲ.

೫. ಅಸತ್ಯ ಮತ್ತು ಅನ್ಯಾಯವನ್ನು ಎದುರಿಸಲು ನಾನು ಸದಾ ಸಿದ್ಧನಾಗಿರುತ್ತೇನೆ.

೬. ನಾನು ನಿಯಮಿತವಾಗಿ ಅಧ್ಯಯನಕ್ಕೆ ಸಮಯ ಕೊಡುತ್ತೇನೆ.

೭. ನಾನು ಇಪ್ಪತ್ತೈದು ರೂಪಾಯಿಗಳನ್ನು ಅಥವಾ ಖಾದಿದಾರದ ಐದು ಲಡಿಗಳನ್ನು ಪ್ರತಿವರ್ಷ ಸದಸ್ಯತ್ವ ಶುಲ್ಕವನ್ನಾಗಿ ಕೊಡುತ್ತೇನೆ.

ಲೋಕಸೇವಕರ ಪೂರ್ಣ ಹೆಸರು ಮತ್ತು ವಿಳಾಸ

-----------------------------------

________________________________

____________________ ಲೋಕಸೇವಕರ ಹಸ್ತಾಕ್ಷರ

# ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳು

ಸತ್ಯ ಮತ್ತು ಅಹಿಂಸೆ ಆಧಾರಿತ ಸಮಾಜವನ್ನು ನಿರ್ಮಿಸುವುದು ಸರ್ವ ಸೇವಾ ಸಂಘದ ಗುರಿಯಾಗಿದೆ. ಅಂತಹ ಸಮಾಜದಲ್ಲಿ ಇಡೀ ಜೀವನ ಪದ್ಧತಿ ಮಾನವೀಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಓತಪ್ರೋತವಾಗಿರುತ್ತದೆ. ಅಲ್ಲಿ ಶೋಷಣೆ, ಅನೈತಿಕತೆ, ದಬ್ಬಾಳಿಕೆ ಅಥವಾ ಅನ್ಯಾಯ ಲವಲೇಶವೂ ಇರುವುದಿಲ್ಲ. ಅಷ್ಟೇ ಅಲ್ಲ ಅಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಪರಿಪೂರ್ಣ ವಿಕಾಸಕ್ಕೆ ಅವಕಾಶವಿರುತ್ತದೆ.

ಈ ಗುರಿ ತಲುಪುವುದಕ್ಕಾಗಿ ಸರ್ವಸೇವಾ ಸಂಘ ರಾಜ್ಯ ಶಕ್ತಿಯನ್ನು ಪಡೆಯುವ ಹಂಬಲದಿಂದ ದೂರವಿರುತ್ತದೆ. ಪಕ್ಷಾಧಾರಿತ ರಾಜಕಾರಣಕ್ಕೆ ಪರ್ಯಾಯವಾಗಿ ಲೋಕನೀತಿಯ ಆಧಾರದ ಮೇಲೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಅಂಥ ಸಮಾಜದಲ್ಲಿ ಜಾತಿ, ಸಮೂಹ, ಜನಾಂಗ, ವರ್ಗ, ಲಿಂಗ, ವರ್ಣ, ಭಾಷೆ, ಪ್ರದೇಶ ಮತ್ತು ದೇಶ ಇತ್ಯಾದಿ ಯಾವುದೇ ಬಗೆಯ ಭೇದಗಳಿರುವುದಿಲ್ಲ. ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲು ಎಂಬ ಜೀವನ ಪದ್ಧತಿಯನ್ನು ರೂಪಿಸಲು ಶ್ರಮಿಸುತ್ತದೆ. ವಿಕೇಂದ್ರೀಕೃತ ಆರ್ಥಿಕ ಕೈಗಾರಿಕೆಗಳಾದ ಖಾದಿ, ಗ್ರಾಮೋದ್ಯೋಗ, ವ್ಯವಸಾಯ ಮತ್ತು ಪಶುಸಂಗೋಪನೆ ಬದುಕಿನ ಮಾರ್ಗಗಳಾಗಿರುತ್ತದೆ. ಸಂಘವು ತನ್ನ ಕಾರ್ಯಕ್ರಮಗಳ ಮೂಲಕ ಶಾಂತಿ, ಪ್ರೇಮ, ಅನುಕಂಪ, ಜೀವನ ಗೌರವ ಮುಂತಾದ ಭಾವನೆಗಳನ್ನು ಜನರಲ್ಲಿ ಉದ್ದೀಪನಗೊಳಿಸುವುದು. ಸರ್ವೋದಯ ಸಮಾಜ ರಚನೆಗಾಗಿ ಅಹಿಂಸೆಯ ಮಾರ್ಗದ ಮೂಲಕ ಲೋಕನೀತಿಯನ್ನು ಸ್ಥಾಪಿಸುವುದು. ಅಗತ್ಯಬಿದ್ದಲ್ಲಿ ಸತ್ಯಾಗ್ರಹದ ಕ್ರಮಗಳನ್ನೂ ಕೈಗೊಳ್ಳುವುದು.

## ಸರ್ವೋದಯ ಮಿತ್ರತ್ವದ ನಮೂನೆ

೧. ಸತ್ಯ ಮತ್ತು ಅಹಿಂಸೆಯ ಮೌಲ್ಯಗಳ ಬಗ್ಗೆ ನನಗೆ ಹೃತ್ಪೂರ್ವಕ ಗೌರವವಿದೆ.

೨. ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳ ಬಗ್ಗೆ ನನ್ನ ಸಹಾನುಭೂತಿ ಇದೆ.

೩. ನನ್ನ ಸಹ ಮಿತ್ರತ್ವದ ಗುರುತಾಗಿ ಸರ್ವ ಸೇವಾ ಸಂಘಕ್ಕೆ ಪ್ರತಿವರ್ಷ ೧೦ರೂ ಕೊಡುತ್ತೇನೆ.

ಪೂರ್ಣಹೆಸರು : ______________________________

ಪೂರ್ಣ ವಿಳಾಸ: ______________________________

______________________________

# ಬಾಂಧವ್ಯ

**ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.**

**ನವೀಕರಿಸಿದ ಚಂದಾದಾರರು**

ಶ್ರೀ.ಹೆಚ್.ಎಂ.ಶಿವಣ್ಣ – ಹಾಸನ

ಶ್ರೀ.ಮಧು ಅಯ್ಯಂಗಾರ್ – ಮೈಸೂರು

**ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು**

ಶ್ರೀ.ಎಲ್.ಎನ್.ಶಾಸ್ತ್ರೀ, ಶ್ರೀ.ಡಿ.ಸಿದ್ದರಾಜು – ಬೆಂಗಳೂರು

ಶ್ರೀಮತಿ.ಲೀಲಾ ಶಿವಕುಮಾರ್, ಶ್ರೀ.ಎನ್.ಕೇಶವಮೂರ್ತಿ – ಮೈಸೂರು

ಶ್ರೀ.ಬಿ.ಶಿವಲಿಂಗಯ್ಯ – ಬೇಲೂರು

ಶ್ರೀ.ಮೊಹಮ್ಮದ್ ಯಾಕುಬ್ ಪಾಷ – ಹಾರೋಹಳ್ಳಿ

ಶ್ರೀ.ಶಂಕರಗೌಡ .ಸಿ.ಜಿ. – ಹಾವೇರಿ

ಶ್ರೀ.ಎಮ್.ಎಸ್.ಚೆಲುವರಾಜು – ಮಾರಗೌಡನಹಳ್ಳಿ

**ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು**

---

**"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.**

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ತಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

---

**ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ**

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820




ಶ್ರೀಮತಿ/ ಶ್ರೀ..............

505 P.Sund[illegible] Murthy
Bluee Cloud
Technology
No 27, [illegible].V.Arcade,
Opp : Reliance Fresh,
Pavitra Paradise Old
Circle,
Bangalore - 10
94826 84678(M)

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.net
Printed at Sanketh Mudrna, Melkote